377702

ಕ್ರಮ ಸಂಖ್ಯೆ:

ವರ್ಷನ್ ಸಂಕೇತ

**B2**

# ಪ್ರವೇಶ ಪರೀಕ್ಷೆ - 2026

ಪೂರ್ವಾಹ್ನ

ಪತ್ರಿಕೆ-1

| ಪರೀಕ್ಷೆ | ವಿಷಯ ಸಂಕೇತ | ಸಮಯ | ಉತ್ತರಿಸಲು ಇರುವ ಗರಿಷ್ಠ ಅವಧಿ | ಒಟ್ಟು ಅವಧಿ (ಪರೀಕ್ಷಾ ಕೇಂದ್ರ ಪ್ರವೇಶ ಸೇರಿ) |
|---|---|---|---|---|
| ಸಾಮಾನ್ಯ ಜ್ಞಾನ | GSRM25126 | ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ರವರೆಗೆ | 120 ನಿಮಿಷಗಳು | 150 ನಿಮಿಷಗಳು |

| ನಿಮ್ಮ ರಿಜಿಸ್ಟರ್ ನಂಬರ್ ಬರೆಯಿರಿ | ಒಟ್ಟು ಪ್ರಶ್ನೆಗಳು | ಗರಿಷ್ಠ ಅಂಕಗಳು |
|---|---|---|
| | 100 | 100 |

## ಅಭ್ಯರ್ಥಿಗಳಿಗೆ ಸೂಚನೆಗಳು

**ಮಾಡಿ :**


1. ಪ್ರವೇಶ ಪತ್ರದಲ್ಲಿದ್ದಂತೆ ನಿಮ್ಮ ರಿಜಿಸ್ಟರ್ ಸಂಖ್ಯೆ ಮತ್ತು ಹೆಸರನ್ನು ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಬರೆದಿರುವುದನ್ನು ಖಚಿತ ಪಡಿಸಿಕೊಳ್ಳಿ, ಮತ್ತು ವ್ಯತ್ಯಾಸವಿದ್ದಲ್ಲಿ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.
2. ಕೊಠಡಿ ಮೇಲ್ವಿಚಾರಕರು ಪ್ರಶ್ನೆಪತ್ರಿಕೆಯನ್ನು ಮತ್ತು ಓ.ಎಂ.ಆರ್ ಉತ್ತರ ಪತ್ರಿಕೆಯನ್ನು ನಿಮಗೆ **2ನೇ ಬೆಲ್** ನಂತರ ಕೊಡುತ್ತಾರೆ.
3. ಅಭ್ಯರ್ಥಿಗಳು ಈ ಪ್ರಶ್ನೆ ಪತ್ರಿಕೆಯಲ್ಲಿರುವ ವರ್ಷನ್ ಕೋಡ್ ಅನ್ನು, ನಿಮಗೆ ನೀಡಲಾದ ಓ.ಎಂ.ಆರ್ ಉತ್ತರ ಹಾಳೆಯ ನಿಗದಿತ ಜಾಗದಲ್ಲಿ ಸ್ಪಷ್ಟವಾಗಿ ಬರೆದು ಸಂಬಂಧಿಸಿದ ವೃತ್ತವನ್ನು ಶೇಡ್ ಮಾಡುವುದು.
4. ಈ ಪ್ರಶ್ನೆಪತ್ರಿಕೆಯಲ್ಲಿನ ವರ್ಷನ್ ಕೋಡ್ ಮತ್ತು ಕ್ರಮ ಸಂಖ್ಯೆಯನ್ನು ನಾಮಿನಲ್ ರೋಲ್‌ನಲ್ಲಿ ಯಾವುದೇ ತಪ್ಪಿಲ್ಲದಂತೆ ನಮೂದಿಸಬೇಕು.
5. ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಕಡ್ಡಾಯವಾಗಿ ಸಹಿ ಮಾಡಬೇಕು.

**ಮಾಡಬೇಡಿ :**

- **ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಟೈಮಿಂಗ್ & ಮಾರ್ಕನ್ನು ತಿದ್ದಬಾರದು / ಹಾಳುಮಾಡಬಾರದು / ಅಳಿಸಬಾರದು.**

## ಅಭ್ಯರ್ಥಿಗಳಿಗೆ ಪ್ರಮುಖ ಸೂಚನೆಗಳು

1. ಪ್ರಶ್ನೆಗಳಲ್ಲಿ ಬಳಸಿರುವ signs and symbols ಗಳನ್ನು, ಬೇರೆ ರೀತಿಯಲ್ಲಿ ಹೇಳದ ಹೊರತು, ನಿಗದಿತ ಪಠ್ಯಪುಸ್ತಕದಲ್ಲಿನ ಅರ್ಥವನ್ನು ಪರಿಗಣಿಸಬೇಕು.
2. ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 100 ಪ್ರಶ್ನೆಗಳಿದ್ದು, ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಪ್ರತಿಯೊಂದು ಪ್ರಶ್ನೆಗೂ ಐದು ಆಯ್ಕೆಗಳು/ ವೃತ್ತಗಳನ್ನು ನೀಡಲಾಗಿದ್ದು, ಮೊದಲ ನಾಲ್ಕು ಆಯ್ಕೆಗಳು/ವೃತ್ತಗಳು 1, 2, 3 ಮತ್ತು 4 ಸೂಕ್ತ ಉತ್ತರವನ್ನು ಶೇಡ್ ಮಾಡಲು ಮತ್ತು ಆ ಪ್ರಶ್ನೆಯನ್ನು ಉತ್ತರಿಸದಿದ್ದಲ್ಲಿ 5 ನೇ ಆಯ್ಕೆ / ವೃತ್ತ 5 ಅನ್ನು ಶೇಡ್ ಮಾಡಲು ತಿಳಿಸಿದೆ.
3. 3ನೇ ಬೆಲ್ ನಂತರ ನಂತರ ಈ ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿರುವ ಸೀಲ್‌ನ್ನು ತೆಗೆಯುವುದು ಹಾಗೂ ಯಾವುದೇ ಪುಟಗಳು ಮುದ್ರಿತವಾಗಿಲ್ಲದಿರುವುದು, ಯಾವುದೇ ಪುಟಗಳು ಹರಿದು ಹೋಗಿರುವುದು, ಇಲ್ಲವೇ ಹಾಳಾಗಿರುವುದು ಕಂಡುಬಂದಲ್ಲಿ ಅಥವಾ ಯಾವುದೇ ಅಕ್ಷರಗಳು ಬಿಟ್ಟುಹೋಗಿದ್ದಲ್ಲಿ ಪರೀಕ್ಷೆ ಪ್ರಾರಂಭವಾದ ಐದು (05) ನಿಮಿಷಗಳೊಳಗೆ ಸಂಪೂರ್ಣ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು. ನಂತರವೇ ಪ್ರತಿಯೊಂದು ಪ್ರಶ್ನೆಗಳನ್ನು ಎಚ್ಚರಿಕೆಯಿಂದ ಓದಿ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
4. ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಪ್ರಶ್ನೆ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಬಾಲ್‌ಪಾಯಿಂಟ್ ಪೆನ್‌ನಿಂದ ಸಂಪೂರ್ಣವಾಗಿ ತುಂಬುವುದು.




5. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
6. ಪ್ರಶ್ನೆಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ಕಚ್ಚಾ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರಪತ್ರಿಕೆಯನ್ನು ಇದಕ್ಕೆ ಉಪಯೋಗಿಸಬೇಡಿ.
7. **ಕೊನೆಯ ಬೆಲ್ ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ, ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.**
8. ಕೊಠಡಿ ಮೇಲ್ವಿಚಾರಕರು ಓ.ಎಂ.ಆರ್. ಮೇಲ್ಭಾಗದ ಹಾಳೆಯನ್ನು ಪ್ರತ್ಯೇಕಿಸಿ (ಕಚೇರಿ ಪ್ರತಿ) ತಮ್ಮ ವಶದಲ್ಲಿಟ್ಟುಕೊಂಡು ಹಿಂಬದಿಯ ಯಥಾಪ್ರತಿಯನ್ನು (ಅಭ್ಯರ್ಥಿಯ ಪ್ರತಿ) ಅಭ್ಯರ್ಥಿಗಳಿಗೆ ಕೊಡುತ್ತಾರೆ.
9. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳಿರುತ್ತದೆ.
10. ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯುನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಅವರಣದೊಳಗೆ ತರುವುದನ್ನು ನಿಷೇಧಿಸಿದೆ.
11. ಋಣಾತ್ಮಕ ಮೌಲ್ಯಮಾಪನವಿದ್ದು, ಪ್ರತಿ ತಪ್ಪು ಉತ್ತರಕ್ಕೆ 1/4 ಅಂಕಗಳನ್ನು ಕಳೆಯಲಾಗುವುದು.
12. ಸರಿಯಾದ ಉತ್ತರ ಗೊತ್ತಿಲ್ಲದ್ದಿದರೆ ಕಡ್ಡಾಯವಾಗಿ 05ನೇ ವೃತ್ತವನ್ನು ಶೇಡ್ ಮಾಡತಕ್ಕದ್ದು, ಇದಕ್ಕಾಗಿ ಪರೀಕ್ಷಾ ಅವಧಿ ನಂತರ 05 ನಿಮಿಷ ಸಮಯಾವಕಾಶ ನೀಡಲಾಗುವುದು. **ಯಾವುದೇ ಆಯ್ಕೆಯನ್ನು /ವೃತ್ತವನ್ನು ಶೇಡ್ ಮಾಡಿಲ್ಲದಿದ್ದರೆ, ಪ್ರತಿ ಪ್ರಶ್ನೆಗೆ 1/4 ಅಂಕಗಳನ್ನು ಕಡಿತಗೊಳಿಸಲಾಗುವುದು.**

**ಸೂಚನೆ : ಪ್ರಶ್ನೆಪತ್ರಿಕೆಯಲ್ಲಿನ ಯಾವುದಾದರೂ ಪ್ರಶ್ನೆಯ ಬಗ್ಗೆ ಸಂದೇಹ ಉಂಟಾದಲ್ಲಿ ಕನ್ನಡ/ಇಂಗ್ಲೀಷ್ ಭಾಗವನ್ನು ನೋಡುವುದು.**

1. ಈ ಕೆಳಕಂಡ ಮಗಧ ರಾಜವಂಶಗಳನ್ನು ಸರಿಯಾದ ಅನುಕ್ರಮದಲ್ಲಿ ಬರೆಯಿರಿ.

a. ನಂದರು
b. ಶುಂಗರು
c. ಮೌರ್ಯರು
d. ಹರ್ಯಂಕರು

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) b, a, d, c
(2) d, a, c, b
(3) c, b, a, d
(4) a, c, d, b

2. ಕೆಳಕಂಡ ಪಟ್ಟಿ I ರಲ್ಲಿನ ಸಂಸ್ಥೆಗಳು ಮತ್ತು ಪಟ್ಟಿ II ರಲ್ಲಿನ ಕೇಂದ್ರಗಳನ್ನು ಸರಿಯಾಗಿ ಹೊಂದಿಸಿ :

| *ಪಟ್ಟಿ I* | | *ಪಟ್ಟಿ II* | |
|---|---|---|---|
| a. | ಕರ್ನಾಟಕ ಸಭಾ | i. | ಪುಣೆ |
| b. | ಜಸ್ಟೀಸ್ ಪಾರ್ಟಿ | ii. | ಬೆಳಗಾವಿ |
| c. | ಸತ್ಯಶೋಧಕ ಸಮಾಜ | iii. | ಧಾರವಾಡ |
| d. | ಮ್ಯಾಜಿನಿ ಕ್ಲಬ್ | iv. | ಮದ್ರಾಸ್ |

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a-i, b-ii, c-iii, d-iv
(2) a-ii, b-iii, c-i, d-iv
(3) a-iii, b-iv, c-i, d-ii
(4) a-iii, b-i, c-iv, d-ii

3. ಈ ಕೆಳಗಿನವರಲ್ಲಿ ಯಾರು/ಯಾರ್‍ಯಾರು ಬೆಳಗಾವಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿರಲಿಲ್ಲ ?

a. ಎಚ್.ಕೆ. ವೀರಣ್ಣ ಗೌಡ
b. ಬಾಲ ಗಂಗಾಧರ ತಿಲಕ್
c. ತಿರುಮಲೆ ರಾಜಮ್ಮ
d. ವಿ. ವೆಂಕಟಪ್ಪ
e. ಅಬ್ಬಾಸ್ ಖಾನ್

ಕೆಳಕಂಡ ಆಯ್ಕೆಗಳಿಂದ ಉತ್ತರವನ್ನು ಆರಿಸಿ :

(1) a, b ಮತ್ತು c
(2) b ಮತ್ತು d
(3) b ಮತ್ತು e
(4) b, d ಮತ್ತು e

Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ

4. ಪೊನ್ನನಿಗೆ ಸಂಬಂಧಿಸಿದ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

a. IIIನೇ ಕೃಷ್ಣ ಈತನ ಪೋಷಕನಾಗಿದ್ದನು.

b. ಈತನು ಪಂಪನ ಸಮಕಾಲೀನನಾಗಿದ್ದನು.

c. ಇತನು ಗತಪ್ರತ್ಯಾಗತ, ಜಿನಾಕ್ಷರಮಾಲೆ ಮತ್ತು ಛಂದೋಂಬುಧಿ ಕೃತಿಗಳನ್ನು ರಚಿಸಿದ್ದಾನೆ.

d. ಈತನ ಶಾಂತಿಪುರಾಣ ಕೃತಿಯ 19ನೇ ತೀರ್ಥಂಕರರ ಜೀವನವನ್ನು ಚಿತ್ರಿಸುತ್ತದೆ.

ಮೇಲಿನ ಹೇಳಿಕೆಗಳಲ್ಲಿ ಎಷ್ಟು ಹೇಳಿಕೆ/ಹೇಳಿಕೆಗಳು ?

(1) ಒಂದು ಹೇಳಿಕೆ ಮಾತ್ರ ಸರಿಯಾಗಿದೆ

(2) ಎರಡು ಹೇಳಿಕೆಗಳು ಮಾತ್ರ ಸರಿಯಾಗಿವೆ

(3) ಮೂರು ಹೇಳಿಕೆಗಳು ಮಾತ್ರ ಸರಿಯಾಗಿವೆ

(4) ಎಲ್ಲಾ ನಾಲ್ಕು ಹೇಳಿಕೆಗಳು ಸರಿಯಾಗಿವೆ

5. ಕೆಳಗಿನವುಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ :

a. ಮೈಸೂರು ಶಿಶು ವಿವಾಹ ಕಾಯ್ದೆ

b. ಕೋಲಾರದಲ್ಲಿ ಬಂಗಾರದ ಗಣಿಗಾರಿಕೆ

c. ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗಳು

d. ಶಿವನಸಮುದ್ರ ಜಲವಿದ್ಯುತ್ ಯೋಜನೆ

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a, b, d, c

(2) b, c, a, d

(3) d, c, a, b

(4) a, d, b, c

6. ಈ ಕೆಳಕಂಡ ಪಟ್ಟಿ I ರಲ್ಲಿನ ಪತ್ರಿಕೆಗಳು ಮತ್ತು ಪಟ್ಟಿ II ರಲ್ಲಿನ ಸಂಪಾದಕರನ್ನು ಸರಿಯಾಗಿ ಹೊಂದಿಸಿ :

| *ಪಟ್ಟಿ I* | *ಪಟ್ಟಿ II* |
|---|---|
| a. ಕನ್ನಡ ಬವೂತಾ | i. ಕಡೆಂಗೋಡ್ಲು ಶಂಕರ ಭಟ್ |
| b. ಕರ್ಮವೀರ | ii. ರಂಗನಾಥ ದಿವಾಕರ |
| c. ಸ್ವತಂತ್ರ ಭಾರತ | iii. ಆಲೂರು ವೆಂಕಟರಾವ್ |
| d. ಜಯ ಕರ್ಣಾಟಕ | iv. ಬಿ.ಎಂ. ಶ್ರೀಕಂಠಯ್ಯ |

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a-iv, b-iii, c-ii, d-i

(2) a-iv, b-ii, c-i, d-iii

(3) a-iii, b-ii, c-iv, d-i

(4) a-i, b-ii, c-iv, d-iii

Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ

7. ಪಟ್ಟದಕಲ್ಲಿನಲ್ಲಿರುವ ವಿರೂಪಾಕ್ಷ ದೇವಾಲಯಕ್ಕೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ :

a. ಈ ದೇವಾಲಯ ತ್ರೈಲೋಕೇಶ್ವರ ದೇವಾಲಯವೆಂದೂ ಪರಿಚಿತವಾಗಿದೆ.

b. II ನೇ ವಿಕ್ರಮಾದಿತ್ಯನು ಕಂಚಿಯ ಮೇಲೆ ಸಾಧಿಸಿದ ವಿಜಯದ ನೆನಪಿಗಾಗಿ ಈ ದೇವಾಲಯವನ್ನು ನಿರ್ಮಿಸಲಾಗಿದೆ.

c. ಸರ್ವಸಿದ್ಧಿ ಆಚಾರಿ ಮತ್ತು ಗುಂಡ ಈ ದೇವಾಲಯದ ಶಿಲ್ಪಿಗಳು.

d. ತ್ರೈಲೋಕ ಮಹಾದೇವಿಯು ಈ ದೇವಾಲಯವನ್ನು ನಿರ್ಮಿಸಿದಳು.

ಮೇಲಿನ ಹೇಳಿಕೆಗಲ್ಲಿ ಎಷ್ಟು ಹೇಳಿಕೆ/ಹೇಳಿಕೆಗಳು ಸರಿಯಾಗಿವೆ/ದೆ ?

(1) ಒಂದು ಹೇಳಿಕೆ ಮಾತ್ರ ಸರಿ
(2) ಎರಡು ಹೇಳಿಕೆಗಳು ಮಾತ್ರ ಸರಿ
(3) ಮೂರು ಹೇಳಿಕೆಗಳು ಮಾತ್ರ ಸರಿ
(4) ಎಲ್ಲಾ ನಾಲ್ಕು ಹೇಳಿಕೆಗಳು ಸರಿ

8. "ಆ್ಯನ್ ಎರಾ ಆಫ್ ಡಾರ್ಕ್‌ನೆಸ್ : ದಿ ಬ್ರಿಟೀಷ್ ಎಂಪೈರ್ ಇನ್ ಇಂಡಿಯಾ" ಪುಸ್ತಕವನ್ನು ಬರೆದವರು ಯಾರು ?

(1) ಬಿಪಿನ್ ಚಂದ್ರ
(2) ವಿ.ಡಿ. ಮಹಾಜನ್
(3) ಉರ್ವಶಿ ಬುಟಾಲಿಯಾ
(4) ಶಶಿ ತರೂರ್

9. ಸುಸ್ಥಿರ ಅಭಿವೃದ್ಧಿ ಧ್ಯೇಯಗಳು ಈ ಕೆಳಗಿನವುಗಳನ್ನು ಒಳಗೊಂಡಿದೆ :

(1) 17 ಧ್ಯೇಯಗಳು, 169 ಗುರಿಗಳು ಹಾಗೂ 232 ಸೂಚಕಗಳು
(2) 17 ಗುರಿಗಳು, 169 ಧ್ಯೇಯಗಳು ಹಾಗೂ 232 ಸೂಚಗಳು
(3) 17 ಸೂಚಕಗಳು, 169 ಧ್ಯೇಯಗಳು ಹಾಗೂ 232 ಗುರಿಗಳು
(4) 17 ಧ್ಯೇಯಗಳು, 169 ಸೂಚಕಗಳು ಹಾಗೂ 232 ಗುರಿಗಳು

10. ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಕರ್ನಾಟಕ ಗ್ರಾಮೀಣ ಬ್ಯಾಂಕಿಗೆ ಸಂಬಂಧಪಟ್ಟದಂತೆ ಸರಿಯಾಗಿವೆ ?

a. ಇದು ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್ ಆಗಿದೆ.

b. ಇದು ಕರ್ನಾಟಕದ ಹಲವು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ ಒಂದಾಗಿದೆ.

c. ಇದು ಕರ್ನಾಟಕದ ಏಕೈಕ ಪ್ರಾದೇಶಿಕ ಗ್ರಾಮೀಣ ಬ್ಯಾಂಕಾಗಿದೆ.

d. ಈ ಬ್ಯಾಂಕಿನ ಕೇಂದ್ರ ಕಚೇರಿಯು ಬಳ್ಳಾರಿ ನಗರದಲ್ಲಿದೆ.

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) b ಮತ್ತು d
(2) a ಮಾತ್ರ
(3) a ಮತ್ತು c
(4) c ಮತ್ತು d

Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ

11. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಿಗಳನ್ನು ಗುರುತಿಸಿ :

| | ವಿಭಾಗ | | ತಾಲ್ಲೂಕು |
|---|---|---|---|
| a. | ಬೆಂಗಳೂರು | – | ಚನ್ನಗಿರಿ |
| b. | ಬೆಳಗಾವಿ | – | ಹೊನ್ನಾವರ |
| c. | ಕಲಬುರಗಿ | – | ಮಸ್ಕಿ |
| d. | ಮೈಸೂರು | – | ಬ್ರಹ್ಮಾವರ |

ಕೆಳಕಂಡ ಆಯ್ಕೆಗಳಿಂದ ಉತ್ತರವನ್ನು ಆರಿಸಿ :

(1) a ಮತ್ತು b ಸರಿಯಾಗಿವೆ

(2) a, b ಮತ್ತು c ಸರಿಯಾಗಿವೆ

(3) c ಮತ್ತು d ಸರಿಯಾಗಿವೆ

(4) a, b, c ಮತ್ತು d ಸರಿಯಾಗಿವೆ

12. ಡಿಸೆಂಬರ್ 2025 ರಲ್ಲಿದ್ದಂತೆ ಭಾರತ ಸರ್ಕಾರದ ಕೇಂದ್ರ ಸಹಕಾರ ಮಂತ್ರಿಗಳು ಯಾರು ?

(1) ಶ್ರೀ ಶಿವರಾಜ್ ಸಿಂಗ್ ಚೌಹಾಣ್

(2) ಶ್ರೀ ಅಮಿತ್ ಷಾ

(3) ಶ್ರೀ ಅರ್ಜುನ್ ರಾಮ್ ಮೇಘ್ವಾಲ್

(4) ಶ್ರೀ ವಿ. ಸೋಮಣ್ಣ

13. 2025 ರಲ್ಲಿ ಉಂಟಾದ ಈ ಕೆಳಕಂಡ ಚಂಡಮಾರುತಗಳನ್ನು ಪರಿಗಣಿಸಿ :

a. ಅವೋ

b. ಮೊಂತಾ

c. ಕ್ರೋಸ್

d. ದಿತ್ವಾ

ಮೇಲಿನ ಚಂಡಮಾರುತಗಳಲ್ಲಿ ಯಾವುವು ಭಾರತಕ್ಕೆ ಬಂದು ಅಪ್ಪಳಿಸಿದವು ?

(1) a ಮತ್ತು b

(2) a ಮತ್ತು d

(3) b ಮತ್ತು c

(4) b ಮತ್ತು d

Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ

14. ಕರ್ನಾಟಕದ ಆರ್ಥಿಕತೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

a. 2011 ರ ಜನಗಣತಿಯ ಪ್ರಕಾರ ಕರ್ನಾಟಕದ ಗ್ರಾಮೀಣ ಜನಸಂಖ್ಯೆಯ ಶೇಕಡವಾರು ಪ್ರಮಾಣ ಭಾರತದ ಮಟ್ಟಕ್ಕಿಂತ ಕಡಿಮೆ ಇದೆ.

b. 2011 ರ ಜನಗಣತಿಯಂತೆ ಕರ್ನಾಟಕದಲ್ಲಿ ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆಗಳು ಅತಿ ಕಡಿಮೆ ಜನಸಾಂದ್ರತೆ ಹೊಂದಿವೆ.

ಕೆಳಕಂಡ ಆಯ್ಕೆಗಳಿಂದ ಉತ್ತರವನ್ನು ಆರಿಸಿ :

(1) ಕೇವಲ a ಮಾತ್ರ ಸರಿಯಾಗಿದೆ
(2) ಕೇವಲ b ಮಾತ್ರ ಸರಿಯಾಗಿದೆ
(3) a ಮತ್ತು b ಎರಡೂ ಸರಿಯಾಗಿವೆ
(4) a ಮತ್ತು b ಎರಡೂ ತಪ್ಪಾಗಿವೆ

15. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ :

a. ಹೀಲಿಯಂ ಅನಿಲವನ್ನು 'ಲಿಫ್ಟಿಂಗ್ ಅನಿಲ' ವಾಗಿ ಉಪಯೋಗಿಸಲಾಗುತ್ತದೆ.

b. ಹೀಲಿಯಂ ಅತೀ ಹಗುರವಾದ ಅನಿಲ.

c. ಹೀಲಿಯಂ ಒಂದು ಸ್ಫೋಟಿಸದ ಮತ್ತು ಜಡ ಅನಿಲವಾಗಿದೆ.

ಹೀಲಿಯಂಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿ ?

(1) a ಮತ್ತು b ಸರಿಯಾಗಿವೆ ಮತ್ತು c ಹೇಳಿಕೆಯು a ಗೆ ಸರಿಯಾದ ವಿವರಣೆಯಾಗಿದೆ.

(2) a ಮತ್ತು c ಸರಿಯಾಗಿವೆ ಮತ್ತು b ಹೇಳಿಕೆಯು a ಗೆ ಸರಿಯಾದ ವಿವರಣೆಯಾಗಿದೆ.

(3) b ಮತ್ತು c ಸರಿಯಾಗಿವೆ ಮತ್ತು a ತಪ್ಪಾಗಿದೆ.

(4) a ಸರಿಯಾಗಿದೆ ಮತ್ತು c ಯು a ಗೆ ಸರಿಯಾದ ವಿವರಣೆಯಾಗಿದೆ.

16. ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ನೀರಿನ ಕುದಿಯುವ ಬಿಂದುವಿಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆಗಳಾಗಿವೆ ?

a. ನೀರಿನ ಕುದಿಯುವ ಬಿಂದು ಎತ್ತರ (ಆಲ್ಟಿಟ್ಯೂಡ್)ಬದಲಾದಂತೆ ಬದಲಾಗುತ್ತದೆ.

b. ನೀರಿನ ಕುದಿಯುವ ಬಿಂದು ಆವಿಯಾಗದ ದ್ರವ್ಯಗಳು ಹೆಚ್ಚಾದಂತೆ ಹೆಚ್ಚಾಗುತ್ತದೆ.

c. ನೀರಿನ ಕುದಿಯುವ ಬಿಂದು ಯಾವಾಗಲೂ 100°C ಆಗಿದ್ದು, ಇದು ಬದಲಾಗುವದಿಲ್ಲ.

d. ನೀರಿನ ಕುದಿಯುವ ಬಿಂದು ಹೊರಗಿನ ಒತ್ತಡ ಹೆಚ್ಚಿದಂತೆ ಕಡಿಮೆಯಾಗುತ್ತದೆ.

ಕೆಳಕಂಡ ಆಯ್ಕೆಗಳಿಂದ ಉತ್ತರವನ್ನು ಆರಿಸಿ :

(1) a, b ಮತ್ತು c
(2) c ಮತ್ತು d
(3) b, c ಮತ್ತು d
(4) b ಮತ್ತು c

Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ

17. 10% ಸಕ್ಕರೆಯ ದ್ರಾವಣವನ್ನು ಈ ಕೆಳಗಿನ ರೀತಿಯಲ್ಲಿ ಸಕ್ಕರೆಯನ್ನು ಕರಗಿಸುವದರಿಂದ ತಯಾರಿಸಬಹುದು :

a. 10 ಗ್ರಾಂ ಸಕ್ಕರೆಯನ್ನು 1·0 ಗ್ರಾಂ ನೀರಿನಲ್ಲಿ.

b. 10 ಗ್ರಾಂ ಸಕ್ಕರೆಯನ್ನು 1 ಲೀಟರ್ ನೀರಿನಲ್ಲಿ.

c. 10 ಗ್ರಾಂ ಸಕ್ಕರೆಯನ್ನು 10 ಗ್ರಾಂ ನೀರಿನಲ್ಲಿ.

d. 10 ಗ್ರಾಂ ಸಕ್ಕರೆಯನ್ನು 100 ಮಿಲಿಲೀಟರ್ ನೀರಿನಲ್ಲಿ.

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a ಮಾತ್ರ (2) a ಮತ್ತು b ಎರಡೂ

(3) c ಮಾತ್ರ (4) d ಮಾತ್ರ

18. ಈ ಕೆಳಗಿನ ಸುಳಿಹುಗಳನ್ನಾಧರಿಸಿ ರಾಸಾಯನಿಕದ ಹೆಸರನ್ನು ಪತ್ತೆ ಹಚ್ಚಿ :

ಸುಳಿಹು (i) : ಇದನ್ನು ಮಾಯಿಶ್ಚರೈಸಿಂಗ್ ಕ್ರೀಮ್‌ಗಳಲ್ಲಿ ಉಪಯೋಗಿಸಲಾಗುತ್ತದೆ.

ಸುಳಿಹು (ii) : ಇದು ಪೊಟ್ಯಾಶಿಯಂ ಪರಮಾಂಗನೇಟ್ ($KMnO_4$) ಜೊತೆ ವರ್ತಿಸಿ ಬೆಂಕಿಯನ್ನು ಉತ್ಪಾದಿಸುತ್ತದೆ.

ಸುಳಿಹು (iii) : ಇದನ್ನು ಸ್ಯಾನಿಟೈಜರ್‌ಗಳಲ್ಲಿ ಗಳಲ್ಲಿ ಯಥೇಚ್ಛವಾಗಿ ಬಳಸಲಾಗುತ್ತದೆ.

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) ಆಕ್ರಲಿಕ್ ಅಮ್ಲ (2) ಅಸಿಟೋನ್

(3) ಗ್ಲಿಸರಿನ್ (4) ಐಸೋಪ್ರೊಪನಾಲ್

19. ಈ ಕೆಳಗೆ ಕೊಟ್ಟಿರುವ ಜೋಡಿಗಳಲ್ಲಿ ವಿಟಮಿನ್ ಗಳು ಮತ್ತು ರೋಗಗಳಿಗೆ ಸಂಬಂಧಿಸಿದಂತೆ ಯಾವ ಜೋಡಿ/ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗಿದೆ/ವೆ ?

a. ವಿಟಮಿನ್ $B_6$ : ಕನ್‌ವಲ್ಶನ್ಸ್

b. ವಿಟಮಿನ್ $B_{12}$ : ಫರ್ನೀಶಿಯಸ್ ಅನಿಮೀಯಾ

c. ವಿಟಮಿನ್ A : ಕ್ಸೆರೊಫ್ಥಾಲ್ಮಿಯಾ

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) b ಮಾತ್ರ (2) b ಮತ್ತು c ಮಾತ್ರ

(3) a ಮತ್ತು c ಮಾತ್ರ (4) a, b ಮತ್ತು c

20. ಸಸ್ಯಗಳಲ್ಲಿ ಆಹಾರವು ಆಕರ ಅಂಗದಿಂದ ಉಪಯೋಗಿಸಲ್ಪಡುವ ಅಂಗಕ್ಕೆ ವರ್ಗಾವಣೆಯಾಗುವ ರೂಪ :

(1) ಪ್ರೋಟೀನ್‌ಗಳು (2) ಲಿಪಿಡ್‌ಗಳು

(3) ಸುಕ್ರೋಸ್ (4) ಪಿಷ್ಟ

Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ

21. ಈ ಕೆಳಗಿನವುಗಳನ್ನು ಪರಿಗಣಿಸಿ :

a. ವಾಟರ್ ಹೈಯಾಸಿಂಥ್

b. ಲಂಟಾನಾ

c. ಕ್ಯಾರೆಟ್ ಗ್ರಾಸ್

d. ಡೊಡೊ

e. ಪ್ಯಾಸೆಂಜರ್ ಪಿಜನ್

ಯಾವುದೇ ಉದ್ದೇಶವಿಲ್ಲದೆ, ಅಥವಾ ಉದ್ದೇಶಪೂರ್ವಕವಾಗಿ ಪರಿಚಯಿಸಲ್ಪಟ್ಟು, ಕಳೆಗಳಾದ ಪ್ರಭೇಧಗಳು ಈ ಕೆಳಗಿನವುಗಳಲ್ಲಿ ಯಾವುವೆಂದರೆ :

(1) a, b, c ಮಾತ್ರ

(2) a, d, e ಮಾತ್ರ

(3) b, c, d ಮಾತ್ರ

(4) c, d, e ಮಾತ್ರ

22. ಕ್ಲೋರೋಫಾರ್ಮ್ ($CHCl_3$) ಬೆಳಕಿನಲ್ಲಿ ಗಾಳಿಯೊಂದಿಗೆ ಉತ್ಕರ್ಷಣೆಗೊಂಡಾಗ ಬಿಡುಗಡೆಯಾಗುವ ವಿಷ ಅನಿಲ :

(1) ಮೀಥೈಲ್ ಐಸೋಸಯನೈಡ್

(2) ಮೀಥೈಲ್ ಸಯನೈಡ್

(3) ಹೈಡ್ರೋಕ್ಲೋರಿಕ್ ಆಮ್ಲ

(4) ಫೋಸ್‌ಜೀನ್

23. ಹೃದಯದ ಕೋಣೆಗಳ ಸಂಖ್ಯೆಯ ಆಧಾರದ ಮೇಲೆ ಕೆಲವು ಜೀವಿಗಳ ಗುಂಪನ್ನು ಮಾಡಲಾಗಿದೆ. ಸರಿಯಾದ ಗುಂಪನ್ನು ಆಯ್ಕೆ ಮಾಡಿರಿ :

a. 2 ಕೋಣೆಗಳು — ಮೀನು, ಮಾನವ, ಕಪ್ಪೆ

b. 3 ಕೋಣೆಗಳು — ಕಪ್ಪೆ, ಸಾಲ್‌ಮಂಡರ್, ಹಾವು

c. 4 ಕೋಣೆಗಳು — ಪಕ್ಷಿಗಳು, ಮಾನವ, ಗೊರಿಲ್ಲಾ

d. 1 ಕೋಣೆ — ಆಮೆ, ಮೀನು, ನೆಲಕಪ್ಪೆ (ಟೋಡ್)

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a ಗುಂಪು ಮಾತ್ರ

(2) a ಮತ್ತು c ಗುಂಪುಗಳು

(3) b ಮತ್ತು c ಗುಂಪುಗಳು

(4) d ಗುಂಪು ಮಾತ್ರ

4. ಈ ಕೆಳಗೆ ನೀಡಲಾದ ಮಾನವನ ಜೀರ್ಣಕ್ರಿಯೆಯ ಹಂತಗಳನ್ನು ಕ್ರಮಾನುಗತವಾಗಿ ತಿಳಿಸಿ :

a. ಹೀರುವಿಕೆ

b. ಜೀರ್ಣಿಸುವಿಕೆ

c. ಸ್ವಾಂಗೀಕರಣ

d. ಹೊರಹಾಕುವಿಕೆ

e. ಸ್ವೀಕರಣೆ

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a, c, d, b, e (2) e, b, a, c, d

(3) d, a, b, c, e (4) b, a, c, e, d

5. "ಒಂದು ವಸ್ತುವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ದ್ರವದಲ್ಲಿ ಮುಳುಗಿಸಿದಾಗ, ಆದರಿಂದ ಪಲ್ಲಟಗೊಂಡ ದ್ರವದ ತೂಕದಷ್ಟೇ ಮೇಲ್ಮುಖ ಬಲವನ್ನು ಅದು ಅನುಭವಿಸುತ್ತದೆ." ಈ ಹೇಳಿಕೆ ಇದಕ್ಕೆ ಸಂಬಂಧಿಸಿದೆ :

(1) ಆರ್ಕಿಮಿಡೀಸ್ ತತ್ವ

(2) ನ್ಯೂಟನ್‌ನ ಗುರುತ್ವ ನಿಯಮ

(3) ಐನಸ್ಟೀನ್ ಸಾಮಾನ್ಯ ಸಾಪೇಕ್ಷ ಸಿದ್ಧಾಂತ

(4) ಬರ್ನೌಲಿಯ ನಿಯಮ

6. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಹೇಳಿಕೆ I : ಉದ್ದ ವಾಹಕ ತಂತಿಗಳು, ಚಿಕ್ಕ ವಾಹಕ ತಂತಿಗಳಿಗಿಂತ ಹೆಚ್ಚಿನ ಪ್ರತಿರೋಧವನ್ನು ಹೊಂದಿರುತ್ತವೆ.

ಹೇಳಿಕೆ II : ವಾಹಕ ತಂತಿಯ ಪ್ರತಿರೋಧವು ಅದರ ಉದ್ದಕ್ಕೆ ವಿಲೋಮಾನುಪಾತದಲ್ಲಿರುತ್ತದೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಯಾವುದೆಂದು ಆಯ್ಕೆ ಮಾಡಿ.

(1) ಹೇಳಿಕೆ I ಮತ್ತು ಹೇಳಿಕೆ II ಸರಿಯಾಗಿದ್ದು ಹೇಳಿಕೆ II, ಹೇಳಿಕೆ I ರ ಸರಿಯಾದ ವಿವರಣೆಯಾಗಿದೆ.

(2) ಹೇಳಿಕೆ I ಮತ್ತು ಹೇಳಿಕೆ II ಸರಿಯಾಗಿದ್ದು ಹೇಳಿಕೆ II, ಹೇಳಿಕೆ I ರ ಸರಿಯಾದ ವಿವರಣೆಯಾಗಿಲ್ಲ.

(3) ಹೇಳಿಕೆ I ಸರಿಯಾಗಿದೆ, ಆದರೆ ಹೇಳಿಕೆ II ತಪ್ಪಾಗಿದೆ.

(4) ಹೇಳಿಕೆ I ಸರಿಯಾಗಿಲ್ಲ, ಆದರೆ ಹೇಳಿಕೆ II ಸರಿಯಾಗಿದೆ.

**Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ**

27. ಹೊಂದಿಸಿ ಬರೆಯಿರಿ :

| ಪಟ್ಟಿ I | | ಪಟ್ಟಿ II | |
|---|---|---|---|
| a. | ಕಂಪನದ ಆವೃತ್ತಿ | i. | ಆ್ಯಂಪ್ಲಿಟ್ಯೂಡ್ ಅನ್ನು ಆಧರಿಸಿರುತ್ತದೆ |
| b. | ಕಂಪನದ ಅವಧಿ | ii. | ಒಂದು ಸೆಕೆಂಡಿನಲ್ಲಿ ಉಂಟಾದ ಕಂಪನಗಳ ಸಂಖ್ಯೆ |
| c. | ಶಬ್ದದ ತಾರಕತೆ | iii. | ಆವರ್ತನ (ಫ್ರೀಕ್ವೆನ್ಸಿ) ನಿರ್ಧರಿಸುತ್ತದೆ |
| d. | ಶಬ್ದದ ಸ್ಥಾಯಿ | iv. | ಒಂದು ಪೂರ್ಣ ಕಂಪನಕ್ಕೆ ತೆಗೆದುಕೊಂಡ ಕಾಲ |

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a-iv, b-iii, c-ii, d-i
(2) a-i, b-ii, c-iii, d-iv
(3) a-iv, b-i, c-iii, d-ii
(4) a-ii, b-iv, c-i, d-iii

28. ಒಬ್ಬ ನುರಿತ ಕ್ರಿಕೆಟಿಗ ಒಂದು ಚೆಂಡನ್ನು ಕ್ಯಾಚ್ ಹಿಡಿಯುವಾಗ ತನ್ನ ಕೈಗಳನ್ನು ಕೆಳಗೆ ಮಾಡುತ್ತಾನೆ. ಹೀಗೆ ಮಾಡುವುದರ ವೈಜ್ಞಾನಿಕ ಕಾರಣ :

(1) ಕ್ಯಾಚ್‌ನ್ನು ಬಿಡಬಾರದೆಂದು.
(2) ಹಿಮ್ಮೆಟ್ಟಿಸುವ ಬಲವನ್ನು ಹೆಚ್ಚು ಸಮಯದವರೆಗೆ ಹಾಕಲೆಂದು.
(3) ಹಿಮ್ಮೆಟ್ಟಿಸುವ ಬಲವನ್ನು ಕಡಿಮೆ ಸಮಯದವರೆಗೆ ಹಾಕಲೆಂದು.
(4) ಪ್ರೇಕ್ಷಕರನ್ನು ತನ್ನೆಡೆಗೆ ಸೆಳೆಯಲು.

29. ವಾಹನಗಳಲ್ಲಿ ನೀರನ್ನು ತಂಪುಕ ಎಂದು ಬಳಸಲು ಕಾರಣವು :

(1) ಇದರ ವಿಶಿಷ್ಟ ಉಷ್ಣ ಸಾಮರ್ಥ್ಯ ಹೆಚ್ಚಾಗಿದೆ.
(2) ಇದರ ಉಷ್ಣವಾಹಕತ್ವ ಹೆಚ್ಚಾಗಿದೆ.
(3) ಇದರ ವಿಶಿಷ್ಟ ಉಷ್ಣ ಸಾಮರ್ಥ್ಯ ಕಡಿಮೆಯಾಗಿದೆ.
(4) ಇದರ ಉಷ್ಣವಾಹಕತ್ವ ಕಡಿಮೆಯಾಗಿದೆ.

30. ನದಿಗಳು ತಮ್ಮ ಮುಖ್ಯ ನದಿಗಳನ್ನು ಸೇರುವ ಮಾನದಂಡವನ್ನಾಧರಿಸಿ ಈ ಕೆಳಗಿನ ಯಾವ ಕ್ರಮಾನುಗತವು ಸರಿಯಾಗಿದೆ ?

(1) ಝೀಲಂ – ಚೇನಾಬ್ – ಸಟ್ಲೇಜ್ – ಸಿಂಧೂ
(2) ಝೀಲಂ – ಸಟ್ಲೇಜ್ – ಚೇನಾಬ್ – ಸಿಂಧೂ
(3) ಚೇನಾಬ್ – ಝೀಲಂ – ಸಟ್ಲೇಜ್ – ಸಿಂಧೂ
(4) ಚೇನಾಬ್ – ಸಟ್ಲೇಜ್ - ಝೀಲಂ – ಸಿಂಧೂ

**Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ**

31. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

I. ಜಲ ಜೀವನ್ ಮಿಷನ್ ಅಡಿಯಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಯೋಜಿಸುವುದು, ಅನುಮೋದಿಸುವುದು, ಅನುಷ್ಠಾನಗೊಳಿಸುವುದು, ನಿರ್ವಹಿಸುವುದು ಮತ್ತು ಮೇಲ್ವಿಚಾರಣೆ ಮಾಡುವ ಜವಾಬ್ದಾರಿ ಭಾರತದಲ್ಲಿ ರಾಜ್ಯ ಸರ್ಕಾರಗಳ ಮೇಲಿದೆ.

II. ಕುಡಿಯುವ ನೀರು ಭಾರತದಲ್ಲಿ ರಾಜ್ಯ ವಿಷಯವಾಗಿದೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಯಾವುದೆಂದು ಆಯ್ಕೆ ಮಾಡಿ ?

(1) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿಯಾಗಿವೆ ಮತ್ತು ಹೇಳಿಕೆ II, ಹೇಳಿಕೆ I ನ್ನು ವಿವರಿಸುತ್ತದೆ.

(2) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿಯಾಗಿವೆ ಮತ್ತು ಹೇಳಿಕೆ II, ಹೇಳಿಕೆ I ನ್ನು ವಿವರಿಸುವುದಿಲ್ಲ.

(3) ಹೇಳಿಕೆ I ಸರಿಯಾಗಿದೆ, ಆದರೆ ಹೇಳಿಕೆ II ತಪ್ಪಾಗಿದೆ.

(4) ಹೇಳಿಕೆ I ತಪ್ಪಾಗಿದೆ, ಆದರೆ ಹೇಳಿಕೆ II ಸರಿಯಾಗಿದೆ.

32. ಡಿಸೆಂಬರ್ 2025 ರಂತೆ ಭಾರತ ಮತ್ತು ಕರ್ನಾಟಕ ರಾಜ್ಯದಲ್ಲಿರುವ ರಾಮ್ಸಾರ್ ತಾಣಗಳ ಒಟ್ಟು ಸಂಖ್ಯೆಯು ಕ್ರಮವಾಗಿ ________ ಮತ್ತು ________ .

(1) 85 ಮತ್ತು 1

(2) 90 ಮತ್ತು 1

(3) 70 ಮತ್ತು 2

(4) 96 ಮತ್ತು 4

33. ಪಟ್ಟಿ I ಅನ್ನು ಪಟ್ಟಿ II ರ ಜೊತೆ ಹೊಂದಿಸಿ ಮತ್ತು ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| | ***ಪಟ್ಟಿ I*** | | ***ಪಟ್ಟಿ II*** |
|---|---|---|---|
| a. | ಪರಿಸರ (ಸಂರಕ್ಷಣಾ) ಕಾಯ್ದೆ | i. | 1989 |
| b. | ವಾಯು (ಮಾಲಿನ್ಯ ಪ್ರತಿಬಂಧ ಮತ್ತು ನಿಯಂತ್ರಣ) ಕಾಯ್ದೆ | ii. | 1974 |
| c. | ಜಲ (ಮಾಲಿನ್ಯ ಪ್ರತಿಬಂಧ ಮತ್ತು ನಿಯಂತ್ರಣ) ಕಾಯ್ದೆ | iii. | 1986 |
| d. | ಮಾಂಟ್ರಿಯಲ್ ಒಪ್ಪಂದ | iv. | 1981 |

**ಕೋಡ್‌ಗಳು :**

(1) a-iii, b-iv, c-ii, d-i

(2) a-iv, b-iii, c-i, d-ii

(3) a-iii, b-iv, c-i, d-ii

(4) a-iv, b-i, c-ii, d-iii

**Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ**

34. ಅಪಾಯಕ್ಕೊಳಗಾಗುವ ಸಂಭವವಿರುವ (ಎಂಡೇಜರ್ಡ್), ಭಯದಲ್ಲಿರುವ (ಥ್ರೆಟನ್ಡ್), ಅಳಿವಿನ ಅಂಚಿನಲ್ಲಿರುವ (ವಲ್ನರೆಬಲ್) ಜೀವಿಗಳ ದತ್ತಾಂಶವನ್ನು ಪ್ರಕಟಿಸುವ ಸಂಸ್ಥೆ :

(1) ಡಬ್ಲ್ಯೂ.ಡಬ್ಲ್ಯೂ.ಎಫ್.
(2) ಎಂ.ಎ.ಬಿ.
(3) ಜೆ.ಎಫ್.ಎಂ.
(4) ಐ.ಯು.ಸಿ.ಎನ್.

35. ಚರಂಡಿಯ ಕೊಳಚೆ ನೀರಿನಲ್ಲಿ ಜೈವಿಕ ವಿಘಟನೆ ಹೊಂದಬಹುದಾದ ಸಾವಯುವ ವಸ್ತುಗಳು ಎಷ್ಟಿವೆ ಎಂಬುದನ್ನು ಇದರಿಂದ ಅಳತೆ ಮಾಡುವುದರ ಮೂಲಕ ಅಂದಾಜಿಸಬಹುದಾಗಿದೆ

(1) ಸಾವಯುವ ವಸ್ತುವಿನ ಸಾಂದ್ರತೆ
(2) ತೇಲುವ ಕಸದ ಸಾಂದ್ರತೆ
(3) ಸಾವಯುವ ವಸ್ತುವಿನ ಕರಗುವಿಕೆ
(4) ಜೀವ ರಾಸಾಯನಿಕ ಅಮ್ಲಜನಕ ಬೇಡಿಕೆ

36. ನೆಲದ ವಾತಾವರಣದಿಂದ ಮೇಲ್ಭಾಗದವರೆಗೆ ಇರುವ ಗಾಳಿಯ ಕಾಲಮ್‌ನಲ್ಲಿ ಇರುವ ಓಝೋನ್ ಪದರದ ದಪ್ಪವನ್ನು ಇದರಿಂದ ಅಳೆಯಲಾಗುತ್ತದೆ.

(1) ಡಾಬ್ಮನ್ ಯೂನಿಟ್‌ಗಳು
(2) ಡಾಬ್ಸನ್ ಯೂನಿಟ್‌ಗಳು
(3) ಡಾಲ್ಟನ್ ಯೂನಿಟ್‌ಗಳು
(4) ಡೈಲೆಶನ್ ಯೂನಿಟ್‌ಗಳು

37. ಯಾರು ಕರ್ನಾಟಕದ "ಅರಣ್ಯದ ವಿಶ್ವಕೋಶ" ಎಂದು ಪ್ರಸಿದ್ಧರಾಗಿದ್ದಾರೆ ?

(1) ಸಾಲುಮರದ ತಿಮ್ಮಕ್ಕ
(2) ತುಳಸಿ ಗೌಡ
(3) ಡಾ. ಶಾಂತಿ ತುಮ್ಮಲಾ
(4) ಭಾಗ್ಯಮ್ಮಾ


38. ಫೆಬ್ರವರಿ 2025 ರಲ್ಲಿ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು HELP ನೀತಿ ಅಡಿಯಲ್ಲಿ ಮೂರು ಬ್ಲಾಕ್‌ಗಳಲ್ಲಿ ಹೈಡ್ರೋಕಾರ್ಬನ್ ಅನ್ವೇಷಣೆಗಾಗಿ ಬಿಡ್‌ಗಳನ್ನು ಆಹ್ವಾನಿಸಿತು ಈ ಕೆಳಗಿನ ಯಾವ ಸೂಕ್ಷ್ಮ ಪರಿಸರ ಪ್ರದೇಶ ಪ್ರತಿಘಟನೆಗಳಿಗೆ ಕೇಂದ್ರ ಭಾಗವಾಗಿತ್ತು ?

(1) ಬಾಂಬೆ ಹೈ
(2) ವೆಡ್ಜ್ ಬ್ಯಾಂಕ್
(3) ಪಾಕ್ ಕೊಲ್ಲಿ
(4) ವ್ಹೀಲರ್ ದ್ವೀಪ

39. ಆರು ಜನರಿರುವ ಒಂದು ಕುಟುಂಬದಲ್ಲಿ ರಾಜು ಎಂಬುವವರು ರೋಹಿತ್‌ನ ತಂದೆಯಾಗಿದ್ದು, ಆಶಾರನ್ನು ವಿವಾಹವಾಗಿರುತ್ತಾರೆ. ರಾಜುನ ಸಹೋದರಿಯ ಹೆಸರು ರೇಖಾ ಆಗಿದ್ದು, ರೇಖಾರ ಮಗಳ ಹೆಸರು ಶ್ವೇತಾ ಆಗಿರುತ್ತದೆ. ರೋಹಿತ್‌ಗೆ ರೀತು ಎಂಬ ಸಹೋದರಿ ಇದ್ದಾಳೆ. ಹಾಗಾದರೆ ರಾಜು, ರೀತುನೊಂದಿಗೆ ಯಾವ ರೀತಿಯ ರಕ್ತಸಂಬಂಧ ಹೊಂದಿದ್ದಾರೆ ?

(1) ತಂದೆ
(2) ಮಗ
(3) ಸಹೋದರ
(4) ಅಜ್ಜ

40. ಕೆಳಗಿನ ರೇಖಾಚಿತ್ರವನ್ನು ಅಭ್ಯಸಿಸಿ, ಕೇಳಲಾದ ಪ್ರಶ್ನೆಗೆ ಉತ್ತರವನ್ನು ಆಯ್ಕೆ ಮಾಡಿ :




ತ್ರಿಕೋನವು ಮಹಿಳೆಯರನ್ನು, ವೃತ್ತವು ವಿವಾಹಿತರನ್ನು ಮತ್ತು ಆಯತವು ಉದ್ಯೋಗಸ್ಥರನ್ನು ಪ್ರತಿನಿಧಿಸುತ್ತದೆ, ಉದ್ಯೋಗಸ್ಥರಾಗಿರದ ವಿವಾಹಿತ ಮಹಿಳೆಯರನ್ನು ಪ್ರತಿನಿಧಿಸುವ ಸಂಖ್ಯೆಗಳ ಮೊತ್ತ ಯಾವುದು ?

(1) 11
(2) 9
(3) 7
(4) 6

41. ಒಬ್ಬ ಮನುಷ್ಯನು ಕೆಲವು ಕಿತ್ತಳೆಹಣ್ಣುಗಳನ್ನು ₹ 30 ಕ್ಕೆ ಡಜನ್‌ನಂತೆ ಖರೀದಿಸಿದನು ಮತ್ತು ಅಷ್ಟೇ ಸಂಖ್ಯೆಯ ಕಿತ್ತಳೆ ಹಣ್ಣುಗಳನ್ನು ₹ 25 ಕ್ಕೆ ಡಜನ್‌ನಂತೆ ಖರೀದಿಸಿದನು, ಅವನು ಆ ಹಣ್ಣುಗಳನ್ನು ₹ 32 ಕ್ಕೆ ಡಜನ್‌ನಂತೆ ಮಾರಾಟ ಮಾಡಿದನು ಮತ್ತು ₹ 270 ರಷ್ಟು ಲಾಭ ಗಳಿಸಿದನು. ಅವನು ಖರೀದಿಸಿದ ಕಿತ್ತಳೆ ಹಣ್ಣುಗಳ ಒಟ್ಟು ಸಂಖ್ಯೆಯು :

(1) 60 ಡಜನ್‌ಗಳು
(2) 45 ಡಜನ್‌ಗಳು
(3) 50 ಡಜನ್‌ಗಳು
(4) 70 ಡಜನ್‌ಗಳು

42. ನಗರದ ಮೆಟ್ರೋ ಪ್ರಯಾಣ ದರವು ನಿಗದಿತ ದರ ಮತ್ತು ಪ್ರಯಾಣಿಸಿದ ದೂರಕ್ಕೆ ನಿಗದಿಪಡಿಸಿದ ದರವನ್ನು ಒಳಗೊಂಡಿರುತ್ತದೆ. 5 km ಪ್ರಯಾಣಕ್ಕೆ ಪ್ರಯಾಣ ದರ ₹ 70 ಮತ್ತು 8 km ಪ್ರಯಾಣಕ್ಕೆ ₹ 106 ಪ್ರಯಾಣ ದರವಿರುತ್ತದೆ. ಒಬ್ಬ ವ್ಯಕ್ತಿಯು 20 km ದೂರವನ್ನು ಪ್ರಯಾಣಿಸಿದರೆ ನೀಡಬೇಕಾದ ಒಟ್ಟು ಪ್ರಯಾಣ ದರವೆಷ್ಟು ?

(1) ₹ 200
(2) ₹ 150
(3) ₹ 250
(4) ₹ 300

43. ಒಂದು ನಿರ್ದಿಷ್ಟ ಭಾಷೆಯಲ್ಲಿ LUCKY ಅನ್ನು NSEIA ಎಂದು ಕೋಡ್ ಮಾಡಿದರೆ, ಆ ಭಾಷೆಯಲ್ಲಿ HAPPY ಅನ್ನು ಹೇಗೆ ಕೋಡ್ ಮಾಡಲಾಗುತ್ತದೆ ?

(1) JYRNA
(2) JARNY
(3) JRAYN
(4) JYANR

Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ

44. ತ್ರಿಭುಜದ ಕೋನಗಳು 3 : 2 : 7 ಅನುಪಾತದಲ್ಲಿದ್ದರೆ, ಆ ತ್ರಿಭುಜದ ಕೋನಗಳು :

(1) 45°, 30°, 105°

(2) 42°, 28°, 98°

(3) 48°, 32°, 112°

(4) 60°, 40°, 80°

45. 2025 ರ ಸೆಪ್ಟಂಬರ್ 28 ರಂದು ನಡೆದ ಏಷ್ಯಾ ಕಪ್ ಫೈನಲ್ ನಲ್ಲಿ ಭಾರತ ಪಾಕಿಸ್ತಾನವನ್ನು ಸೋಲಿಸಿ ಪ್ರಶಸ್ತಿ ಗೆದ್ದಿತು. ಈ ಪಂದ್ಯ ನಡೆದ ಸ್ಥಳ :

(1) ದುಬೈ

(2) ಅಬುದಾಬಿ

(3) ಕೊಲಂಬೊ

(4) ಢಾಕಾ

46. ಒಂದು ಫಿಟ್‌ನೆಸ್ ಆ್ಯಪ್ ತನ್ನ ಬಳಕೆದಾರನು ನಡೆದ ಒಂದು ವಾರದ ಕಾಲ್ನಡಿಗೆಯು ಪ್ರತಿ ದಿನಕ್ಕೆ ಸರಾಸರಿ 10,000 ಎಂದು ತೋರಿಸುವುದು. ವಾರದ ಕೊನೆಯ 3 ದಿನಗಳಲ್ಲಿನ ಕಾಲ್ನಡಿಗೆಯ ಎಣಿಕೆಯು ತಲಾ 9000, 12,000 ಮತ್ತು 10,400 ಆದಾಗ ವಾರದ ಮೊದಲ 4 ದಿನಗಳ ಸರಾಸರಿ ಕಾಲ್ನಡಿಗೆಯು ಎಷ್ಟು ?

(1) 9600

(2) 9500

(3) 9560

(4) 9650

47. ಒಂದು ಬಣ್ಣದ ಕಂಪನಿಯು ಕೆಂಪು, ನೀಲಿ ಮತ್ತು ಹಸಿರು ಬಣ್ಣಗಳನ್ನು 1 : 2 : 3 ಪ್ರಮಾಣದಲ್ಲಿ ಬೆರೆಸಿ ಒಂದು ಗೋಡೆಯ ಲೇಪನವನ್ನು ತಯಾರಿಸುತ್ತದೆ. ಒಂದು ವೇಳೆ 60 ಲೀಟರ್ ಗಳಷ್ಟು ಮಿಶ್ರಣವನ್ನು ಸಿದ್ಧಪಡಿಸಿದರೆ, ಕೆಂಪು ಮತ್ತು ನೀಲಿ ಬಣ್ಣವನ್ನು ಒಟ್ಟಾಗಿ ಎಷ್ಟು ಬಳಸಲಾಗುವುದು ?

(1) 10 ಲೀಟರ್‌ಗಳು

(2) 15 ಲೀಟರ್‌ಗಳು

(3) 20 ಲೀಟರ್‌ಗಳು

(4) 30 ಲೀಟರ್‌ಗಳು

48. 6 ಜನರ ಒಂದು ಸಾಲಿನಲ್ಲಿ A ಯು B ನ ಬಲಕ್ಕೆ ಮೂರನೇ ಸ್ಥಾನದಲ್ಲಿದ್ದಾನೆ ಮತ್ತು C ನ ಬಲಕ್ಕೆ 4 ನೇ ಸ್ಥಾನದಲ್ಲಿದ್ದಾನೆ. D ಯು A ನ ತಕ್ಷಣದ ಎಡ ಪಕ್ಕದಲ್ಲಿದ್ದು, E ನ ತಕ್ಷಣದ ಬಲ ಪಕ್ಕದಲ್ಲಿದ್ದಾನೆ. F ಯು A ನ ತಕ್ಷಣದ ಬಲ ಪಕ್ಕಕ್ಕೆ ಇದ್ದರೆ. ಸಾಲಿನ ಸಂಪೂರ್ಣ ಎಡ ತುದಿಯಲ್ಲಿ ಯಾರಿದ್ದಾರೆ ?

(1) A

(2) B

(3) C

(4) D

**Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ**

49. ಹೊಂದಿಸಿ ಬರೆಯಿರಿ :

| ಪಟ್ಟಿ I (ಸರೋವರ) | | ಪಟ್ಟಿ II (ರಾಜ್ಯ) | |
|---|---|---|---|
| a. | ಫತೇ ಸಾಗರ | i. | ಹಿಮಾಚಲ್ ಪ್ರದೇಶ |
| b. | ನಾಕೋ ಸರೋವರ | ii. | ಉತ್ತರಾಖಂಡ |
| c. | ಖೇಚಿಯೋಪಲರಿ ಸರೋವರ | iii. | ರಾಜಸ್ಥಾನ |
| d. | ಭೀಮತಾಲ್ ಸರೋವರ | iv. | ಸಿಕ್ಕಿಂ |

ಕೋಡ್‌ಗಳು :

(1) a-iii, b-i, c-iv, d-ii

(2) a-iii, b-i, c-ii, d-iv

(3) a-iii, b-iv, c-i, d-ii

(4) a-ii, b-i, c-iv, d-iii

50. ಸರಿಯಾಗಿ ಜೋಡಣೆಯಾಗಿರುವ ಆಯ್ಕೆಯನ್ನು ಆರಿಸಿ :

(1) ಖಾರಿಫ್ – ಭತ್ತ, ರಾಬಿ – ಗೋಧಿ, ಜೈಡ್ – ತರಕಾರಿ

(2) ಖಾರಿಫ್ – ಬಾರ್ಲಿ, ರಾಬಿ – ಮೆಕ್ಕೆಜೋಳ, ಜೈಡ್ – ತರಕಾರಿ

(3) ಖಾರಿಫ್ – ಭತ್ತ, ರಾಬಿ – ತರಕಾರಿ, ಜೈಡ್ – ನೆಲಗಡಲೆ

(4) ಖಾರಿಫ್ – ನೆಲಗಡಲೆ, ರಾಬಿ – ಬಾರ್ಲಿ, ಜೈಡ್ – ತರಕಾರಿ

51. NWDPRA ನ್ನು ವಿಸ್ತರಿಸಿ :

(1) ನ್ಯಾಷನಲ್ ವಾಟರ್‌ಶೆಡ್ ಡೆವಲಪ್‌ಮೆಂಟ್ ಪ್ರೊಸಿಜರ್ ಫಾರ್ ರೇನ್‌ಫೆಡ್ ಏರಿಯಾಸ್

(2) ನ್ಯಾಷನಲ್ ವಾಟರ್‌ಶೆಡ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಫಾರ್ ರೇನ್‌ಫೆಡ್ ಏರಿಯಾಸ್

(3) ನ್ಯಾಷನಲ್ ವಾಟರ್‌ಶೆಡ್ ಡೆವಲಪ್‌ಮೆಂಟ್ ಪ್ರೊಜೆಕ್ಟ್ ಫಾರ್ ರೇನ್‌ಫೆಡ್ ಏರಿಯಾಸ್

(4) ನ್ಯಾಚುರಲ್ ವಾಟರ್‌ಶೆಡ್ ಡೆವಲಪ್‌ಮೆಂಟ್ ಪ್ರೊಜೆಕ್ಟ್ ಫಾರ್ ರೇನ್‌ಫೆಡ್ ಏರಿಯಾಸ್

52. ಪಟ್ಟಿ I ಅನ್ನು ಪಟ್ಟಿ II ರ ಜೊತೆ ಹೊಂದಿಸಿ ಮತ್ತು ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| *ಪಟ್ಟಿ I* | *ಪಟ್ಟಿ II* |
|---|---|
| a. ಸುಂದರಗಢ್ | i. ತಾಮ್ರ |
| b. ನೈವೇಲಿ | ii. ಮ್ಯಾಂಗನಿಸ್ |
| c. ಬಾಲಘಾಟ್ | iii. ಕಬ್ಬಿಣದ ಅದಿರು |
| d. ಚಾಂದ್ ಮಾರಿ | iv. ಲಿಗ್ನೈಟ್ |

**ಕೋಡ್‌ಗಳು :**

(1) a-iii, b-iv, c-ii, d-i
(2) a-iii, b-iv, c-i, d-ii
(3) a-iii, b-i, c-iv, d-ii
(4) a-i, b-ii, c-iii, d-iv

53. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

a. ಮುಳ್ಳಯ್ಯನಗಿರಿಯನ್ನು ಹಿಂದೆ ಚಂದ್ರ ದ್ರೋಣ ಪರ್ವತ ಎಂದು ಕರೆಯಲಾಗುತ್ತಿತ್ತು.
b. ಮುಳ್ಳಯ್ಯನಗಿರಿ ಕರ್ನಾಟಕದ ಎರಡನೇ ಅತಿ ಎತ್ತರದ ಬೆಟ್ಟವಾಗಿದೆ.
c. ಕರಾವಳಿ ಮೈದಾನವನ್ನು ಹೊರತುಪಡಿಸಿದರೆ, ಶಿವಮೊಗ್ಗ ಜಿಲ್ಲೆಯ ಭೀಮೇಶ್ವರ ಕಣಿವೆಯು ಕರ್ನಾಟಕದ ಅತ್ಯಂತ ಕಡಿಮೆ ಎತ್ತರದ ಪ್ರದೇಶವಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

(1) a ಮತ್ತು b ಮಾತ್ರ
(2) a ಮತ್ತು c ಮಾತ್ರ
(3) b ಮತ್ತು c ಮಾತ್ರ
(4) a, b ಮತ್ತು c

54. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಣೆಗಳನ್ನು ಗುರುತಿಸಿ :

| | ನದಿ | | ಜಲಪಾತ |
|---|---|---|---|
| a. | ಘಟಪ್ರಭಾ | – | ಗೋಕಾಕ್ |
| b. | ಮಹಾದಾಯಿ | – | ಕಳಸ |
| c. | ಗಂಗಾವಳಿ | – | ಉಂಚಳ್ಳಿ |
| d. | ಅಘನಾಶಿನಿ | – | ಅಬ್ಬಿ |

ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a ಮತ್ತು b
(2) a ಮತ್ತು c
(3) b, c ಮತ್ತು d
(4) a, b ಮತ್ತು c

55. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಣೆಗಳನ್ನು ಗುರುತಿಸಿ :

| | ಕರ್ನಾಟಕದಲ್ಲಿ ದ್ವೀಪಗಳು | | ಜಿಲ್ಲೆ |
|---|---|---|---|
| a. | ಕೊಕೊನಟ್ ದ್ವೀಪ | – | ಉಡುಪಿ |
| b. | ಅಂಜಿದೀವಾ ದ್ವೀಪ | – | ದಕ್ಷಿಣ ಕನ್ನಡ |
| c. | ಕುರುಂಗಡ ದ್ವೀಪ | – | ಉತ್ತರ ಕನ್ನಡ |

ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a ಮತ್ತು b ಮಾತ್ರ
(2) a ಮತ್ತು c ಮಾತ್ರ
(3) b ಮತ್ತು c ಮಾತ್ರ
(4) a, b ಮತ್ತು c

56. ಕೆಳಗಿನ ಮೋಡಗಳ ಕ್ರಮವನ್ನು ಅವುಗಳ ಎತ್ತರಕ್ಕೆ ಅನುಗುಣವಾಗಿ ಆಯ್ಕೆಮಾಡಿ :

a. ಹಿಮಕಣ ಮೋಡಗಳು
b. ಉನ್ನತ ಪದರ ಮೋಡಗಳು
c. ಹಿಮಕಣ ಪದರ ಮೋಡಗಳು
d. ವೃಷ್ಟಿ ಪದರ ಮೋಡಗಳು

ಸರಿಯಾದ ಕ್ರಮವನ್ನು ಆಯ್ಕೆಮಾಡಿ :

(1) a, c, b, d
(2) a, d, c, b
(3) d, b, c, a
(4) b, a, d, c

57. ತೇವಾಂಶವನ್ನು ಅಳೆಯಲು ಬಳಸುವ ಉಪಕರಣ :

(1) ಬಾರೋಮೀಟರ್
(2) ಅನಿಮೋಮೀಟರ್
(3) ಹೈಗ್ರೋಮೀಟರ್
(4) ಸೀಲೋಮೀಟರ್

58. ಈ ಕೆಳಗಿನ ಯಾವ ಬುಡಕಟ್ಟು ಭಾರತದಲ್ಲಿ ಹೆಚ್ಚು ವ್ಯಾಪಕವಾಗಿ ಹರಡಿದೆ ?

(1) ಗೊಂಡ್
(2) ಸಂತಾಲ್
(3) ಭಿಲ್
(4) ಒರಾನ್

59. ಕನ್ನಡ ಚಲನಚಿತ್ರ "ಕಂದೀಲು" ಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ತಪ್ಪಾಗಿವೆ ?

a. ಈ ಚಲನಚಿತ್ರವನ್ನು ಯಶೋಧಾ ಪ್ರಕಾಶ್‌ರವರು ನಿರ್ದೇಶಿಸಿದ್ದಾರೆ.

b. 70 ನೇ ರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅತ್ಯುತ್ತಮ ಕನ್ನಡ ಚಲನಚಿತ್ರ ವಿಭಾಗದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

c. ಈ ಚಲನಚಿತ್ರವನ್ನು ನಿರ್ದೇಶಿಸಿದವರು ಗಿರೀಶ್ ಕಾಸರವಳ್ಳಿ.

ಕೆಳಕಂಡ ಆಯ್ಕೆಗಳಿಂದ ಉತ್ತರವನ್ನು ಆರಿಸಿ :

(1) a, b ಮತ್ತು c
(2) b ಮತ್ತು c
(3) a ಮತ್ತು b
(4) a ಮತ್ತು c

60. ಐ.ಎನ್.ಎಸ್.ವಿ. ಕೌಂಡಿನ್ಯಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ತಪ್ಪಾಗಿವೆ ?

a. ಐ.ಎನ್.ಎಸ್.ವಿ. ಕೌಂಡಿನ್ಯವು ತನ್ನ ಚೊಚ್ಚಲ ಸಮುದ್ರಯಾನವನ್ನು ಪೋರಬಂದರಿನಿಂದ ಮಸ್ಕತ್‌ಗೆ ಬೆಳೆಸಿತು.

b. ಐ.ಎನ್.ಎಸ್.ವಿ. ಯ ವಿಸ್ತ್ರತ ರೂಪ ಇಂಡಿಯನ್ ನೇವಲ್ ಶಿಪ್ ವೆಸೆಲ್.

c. ಕ್ರಿ.ಶ. 5 ನೇ ಶತಮಾನದ ಅಜಂತಾ ಗುಹೆಗಳ ಚಿತ್ರಗಳಲ್ಲಿ ಚಿತ್ರಿತವಾದಂತೆ ಇದು ಹೊಲಿಗೆ ಹಾಕಿದ ನೌಕಾಯಾನದ ಹಡಗಾಗಿದೆ.

ಕೆಳಕಂಡ ಆಯ್ಕೆಗಳಿಂದ ಉತ್ತರವನ್ನು ಆರಿಸಿ :

(1) a ಮತ್ತು b
(2) b ಮತ್ತು c
(3) a ಮತ್ತು c
(4) b ಮಾತ್ರ

61. ಡಿಸೆಂಬರ್ 2025 ರಲ್ಲಿ ನವದೆಹಲಿಯ ಕೆಂಪುಕೋಟೆಯಲ್ಲಿ ಜರುಗಿದ ಯುನೆಸ್ಕೋ ದ ಅಂತರ್‌ಸರ್ಕಾರಿ ಸಮಿತಿಯ 20 ನೇ ಅಧಿವೇಶನದಲ್ಲಿ ಭಾರತದ ಯಾವ ಹಬ್ಬವನ್ನು ಯುನೆಸ್ಕೋದ 'ಮಾನವತೆಯ ಅಮೂರ್ತ ಸಾಂಸ್ಕೃತಿಕ ಪರಂಪರೆಯ' ಪಟ್ಟಿಯಲ್ಲಿ ಸೇರಿಸಲಾಗಿದೆ ?

(1) ದೀಪಾವಳಿ
(2) ದಸರಾ
(3) ಗಣೇಶ ಚತುರ್ಥಿ
(4) ಹೋಳಿ

62. ನಾಸಾದ ಸ್ಪೇಸ್ ಎಕ್ಸ್ ಕ್ರೂ-9 ಗಗನಯಾತ್ರಿಗಳು ಏಜೆನ್ಸಿಯ 9 ನೇ ವಾಣಿಜ್ಯ ಪರಿಭ್ರಮಣ ಕಾರ್ಯಾಚರಣೆಯನ್ನು ಪೂರ್ಣಗೊಳಿಸಿದ ನಂತರ ಮೇ 2025 ರಲ್ಲಿ ಯಶಸ್ವಿಯಾಗಿ ಭೂಮಿಗೆ ಮರಳಿದ್ದಾರೆ. ಈ ಕೆಳಗಿನವರಲ್ಲಿ ಯಾವ ಗಗನಯಾತ್ರಿಯು ಆ ಮಿಷನ್ನಿನ ಭಾಗವಾಗಿರಲಿಲ್ಲ ಎಂಬುದನ್ನು ಗುರುತಿಸಿರಿ.

(1) ಸುನೀತಾ ವಿಲ್ಲಿಯಮ್ಸ್
(2) ಶುಭಾಂಶು ಶುಕ್ಲಾ
(3) ಬುಚ್ ವಿಲ್ಮೋರ್
(4) ನಿಕ್ ಹೇಗ್

63. ಭಾರತೀಯ ರೈಲ್ವೆಯು ರೈಲಿನಲ್ಲಿ ಪ್ರಯಾಣಿಸುವ ಮಹಿಳಾ ಪ್ರಯಾಣಿಕರಿಗೆ ಅವರ ಪ್ರಾರಂಭಿಕ ನಿಲ್ದಾಣದಿಂದ ಗಮ್ಯಸ್ಥಾನ ನಿಲ್ದಾಣದವರೆಗೆ ಅವರ ಸಂಪೂರ್ಣ ಪ್ರಯಾಣದ ಅವಧಿಯಲ್ಲಿ ಸುರಕ್ಷತೆ ಮತ್ತು ಭದ್ರತೆ ಒದಗಿಸುವ ಉದ್ದೇಶದಿಂದ ಪ್ರಾರಂಭಿಸಿದ ಯೋಜನೆಯನ್ನು ಹೆಸರಿಸಿರಿ.

(1) ಮಿಷನ್ ಶಕ್ತಿ
(2) ನಿರ್ಭಯಾ ನಿಧಿ
(3) ಮೇರಿ ಸಹೇಲಿ
(4) ಒನ್ ಸ್ಟಾಪ್ ಸೆಂಟರ್ ಸ್ಕೀಮ್

64. ನಾಗರಿಕ ನೋಂದಣಿ ವ್ಯವಸ್ಥೆಯ 2022ನೇ ವರದಿಯನ್ನು ಆಧರಿಸಿ, ಭಾರತದ ಜೀವಸಾಂಖ್ಯಿತ ಅಂಕಿ-ಅಂಶಗಳ ಪ್ರಕಾರ ಈ ಕೆಳಗಿನ ರಾಜ್ಯಗಳನ್ನು ಲಿಂಗಾನುಪಾತಕ್ಕೆ ಸಂಬಂಧಿಸಿದಂತೆ ಇಳಿಕೆ ಕ್ರಮದಲ್ಲಿ ಜೋಡಿಸಿರಿ.

(1) ಕೇರಳ, ಗೋವಾ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ
(2) ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಗೋವಾ, ಕೇರಳ
(3) ಕೇರಳ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಗೋವಾ
(4) ಕೇರಳ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಗೋವಾ

65. ವೆನಿಜುವೆಲಾದ ಅಧ್ಯಕ್ಷರಾಗಿದ್ದ ನಿಕೋಲಾಸ್ ಮಡುರೋ ಅವರನ್ನು ಸೆರೆಹಿಡಿದ ನಂತರ ಅಲ್ಲಿಯ ಮಧ್ಯಂತರ ಅಧ್ಯಕ್ಷರಾಗಿ ಜನವರಿ 2026 ರಲ್ಲಿ ಈ ಕೆಳಗಿನವರಲ್ಲಿ ಯಾರನ್ನು ನೇಮಿಸಲಾಗಿದೆ ?

(1) ಮಮಾಡಿ ಡೌಂಬೌಯಾ
(2) ಜೋಸ್ ಆಂಟೊನಿಯೊ ಕಾಸ್ಟ್
(3) ಪ್ರಬೋವೊ ಸುಬಿಯಾಂಟೊ
(4) ಡೆಲ್ಸಿ ರೊಡ್ರಿಗಸ್

66. ಬೆಂಗಳೂರಿನ ಹೊರಗೆ ಕರ್ನಾಟಕದ ಡಿಜಿಟಲ್ ಆರ್ಥಿಕತೆಯ ವಿಸ್ತೃತ ಬೆಳವಣಿಗೆಯನ್ನು ಸಾಧಿಸುವ ಗುರಿ ಹೊಂದಿರುವ ಮತ್ತು ಕೆಡಿಇಎಂ (KDEM) ನಿಂದ ಮುನ್ನಡೆಸಲ್ಪಡುತ್ತಿರುವ ಮಿಷನ್ ಅನ್ನು ಹೆಸರಿಸಿರಿ.

(1) ಬಿಯಾಂಡ್ ಬೆಂಗಳೂರು
(2) ಬಿಸೈಡ್ಸ್ ಬೆಂಗಳೂರು
(3) ಔಟ್‌ಸೈಡ್ ಬೆಂಗಳೂರು
(4) ಅಲಾಂಗ್ ವಿತ್ ಬೆಂಗಳೂರು

67. ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಜನವರಿ 6, 2026 ರಂದು ಅತೀ ಹೆಚ್ಚು ಕಾಲ ಕರ್ನಾಟಕದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ದಾಖಲೆಯನ್ನು ಸರಿಗಟ್ಟಿದರು. ಆ ಮುಖ್ಯಮಂತ್ರಿಗಳು _______ ಮತ್ತು _______ ದಿನಗಳು.

(1) ಡಿ. ದೇವರಾಜ ಅರಸ್, 2775
(2) ಬಿ.ಎಸ್. ಯಡಿಯೂರಪ್ಪ, 2792
(3) ಡಿ. ದೇವರಾಜ ಅರಸ್, 2792
(4) ಬಿ.ಎಸ್. ಯಡಿಯೂರಪ್ಪ, 2775

68. ಬಾಂಗ್ಲಾದೇಶದ ಮಾಜಿ ಪ್ರಧಾನ ಮಂತ್ರಿ ಖಲೀದಾ ಜಿಯಾರವರಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ವೆ ?

a. ಅವರು ದೇಶದ ದ್ವಿತೀಯ ಮಹಿಳಾ ಪ್ರಧಾನ ಮಂತ್ರಿಯಾಗಿದ್ದರು.

b. ಅವರ ಪತಿ ಜಿಯಾವುರ್ ರೆಹಮಾನ್ ಆಗಿದ್ದರು.

c. ಅವರು ಬಾಂಗ್ಲಾದೇಶ್ ನ್ಯಾಷನಲಿಸ್ಟ್ ಪಕ್ಷಕ್ಕೆ ಸೇರಿದವರಾಗಿದ್ದರು.

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) b ಮಾತ್ರ

(2) b ಮತ್ತು c

(3) a ಮತ್ತು b

(4) a, b ಮತ್ತು c

69. ಕೇಂದ್ರ ಪ್ರಾಯೋಜಿತ "ಪರಿಷ್ಕೃತ ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ (RGSA)" ದ ಅವಧಿ :

(1) 01·04·2021 ರಿಂದ 31·03·2025

(2) 01·04·2025 ರಿಂದ 31·03·2030

(3) 01·04·2022 ರಿಂದ 31·03·2026

(4) 01·04·2020 ರಿಂದ 31·03·2024

70. ದಿ ಸೌತ್ ಕೆನರಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಅನ್ನು 1914 ________ ನಲ್ಲಿ ಕೇಂದ್ರ ಕಛೇರಿಯನ್ನು ಹೊಂದುವ ಮೂಲಕ ಪ್ರಾರಂಭವಾಯಿತು.

(1) ಮಂಗಳೂರು

(2) ಪುತ್ತೂರು

(3) ಉಡುಪಿ

(4) ಮಲ್ಪೆ

71. ಕೆ.ಎಂ.ಎಫ್. (KMF) ಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?

a. ಕೆ.ಎಂ.ಎಫ್. ದಕ್ಷಿಣ ಭಾರತದ ಅತೀದೊಡ್ಡ ಕೋ-ಆಪರೇಟಿವ್ ಡೈರಿ ಫೆಡರೇಷನ್ ಆಗಿದೆ.

b. ಕರ್ನಾಟಕ ರಾಜ್ಯದಲ್ಲಿ 13 ಜಿಲ್ಲಾ ಕೋ-ಆಪರೇಟಿವ್ ಮಿಲ್ಕ್ ಯೂನಿಯನ್‌ಗಳಿವೆ.

c. ಕೆ.ಎಂ.ಎಫ್. ನ ಸೆಂಟ್ರಲ್ ಕ್ವಾಲಿಟಿ ಅಶ್ಯೂರನ್ಸ್ ಲ್ಯಾಬೋರೇಟರಿ ಬೆಂಗಳೂರಿನಲ್ಲಿದೆ.

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a ಮತ್ತು c (2) a ಮತ್ತು b (3) b ಮತ್ತು c (4) a, b ಮತ್ತು c

72. ದಿ ಪ್ರೋವಿಷನ್ಸ್ ಆಫ್ ದಿ ಪಂಚಾಯತ್ಸ್ (ಎಕ್ಸ್ಟೆನ್ಷನ್ ಟು ದಿ ಶೆಡ್ಯೂಲ್ಡ್ ಏರಿಯಾಸ್) ಆಕ್ಟ್ 1996 (PESA) ಇದು ________ ಸಮಿತಿಯ ಶಿಫಾರಸುಗಳನ್ನು ಆಧರಿಸಿದೆ.

(1) ಬಲವಂತ್ ರಾಯ್ ಮೆಹ್ತಾ

(2) ಅಶೋಕ್ ಮೆಹ್ತಾ

(3) ಎಲ್.ಎಂ. ಸಿಂಘ್ವಿ

(4) ಭೂರಿಯಾ

73. 'ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ' ಇರುವ ಸ್ಥಳ ________.

(1) ಬೀದರ್

(2) ಮೈಸೂರು

(3) ಗದಗ್

(4) ಬೆಂಗಳೂರು

74. ಆರ್. ಚಿದಂಬರ್‌ರವರು 2002 ರಿಂದ 2018 ರ ಅವಧಿಯಲ್ಲಿ ಮೂವರು ಪ್ರಧಾನ ಮಂತ್ರಿಗಳ ಅಧಿಕಾರಾವಧಿಯಲ್ಲಿ ಭಾರತ ಸರ್ಕಾರಕ್ಕೆ 2ನೇ ಪ್ರಧಾನ ವೈಜ್ಞಾನಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಆ ಪ್ರಧಾನ ಮಂತ್ರಿಗಳೆಂದರೆ :

a. ಅಟಲ್ ಬಿಹಾರಿ ವಾಜಪೇಯಿ

b. ಇಂದರ್ ಕುಮಾರ್ ಗುಜ್ರಾಲ್

c. ಮನಮೋಹನ್ ಸಿಂಗ್

d. ನರೇಂದ್ರ ಮೋದಿ

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) b, c ಮತ್ತು d

(2) a, b ಮತ್ತು c

(3) a, b ಮತ್ತು d

(4) a, c ಮತ್ತು d

75. ಹೊಂದಿಸಿ ಬರೆಯಿರಿ :

| ಪಟ್ಟಿ I (ಏಕಲವ್ಯ ಪ್ರಶಸ್ತಿ ವಿಜೇತರು) | | ಪಟ್ಟಿ II (ಸಂಬಂಧಿಸಿದ ಕ್ರೀಡೆ) | |
|---|---|---|---|
| a. | ಬಿ. ಹರಿಪ್ರಸಾದ್ | i. | ಕ್ರಿಕೆಟ್ |
| b. | ರೊಬಿನ್ ಉತ್ತಪ್ಪ | ii. | ಹಾಕಿ |
| c. | ಎಸ್.ಕೆ. ಉತ್ತಪ್ಪ | iii. | ಫುಟ್ಬಾಲ್ |
| d. | ಮಮತಾ ಪೂಜಾರಿ | iv. | ವಾಲಿಬಾಲ್ |
| | | v. | ಕಬಡ್ಡಿ |

ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a-iii, b-ii, c-v, d-iv
(2) a-v, b-i, c-ii, d-iv
(3) a-iv, b-i, c-ii, d-v
(4) a-iv, b-ii, c-i, d-v

76. ಭಾರತದ ಮೊದಲ ಸಹಕಾರ ಸಂಘ ಯಾವ ವರ್ಷ ಮತ್ತು ಯಾವ ರಾಜ್ಯದಲ್ಲಿ ಪ್ರಾರಂಭವಾಯಿತು ?

(1) 1904, ಮಹಾರಾಷ್ಟ್ರ
(2) 1905, ಕರ್ನಾಟಕ
(3) 1901, ಮಧ್ಯ ಪ್ರದೇಶ
(4) 1902, ರಾಜಸ್ಥಾನ

77. ಕರ್ನಾಟಕದಲ್ಲಿ "ಯಶಸ್ವಿನಿ ಕೋ-ಆಪರೇಟಿವ್ ಮೆಂಬರ್ಸ್ ಹೆಲ್ತ್ ಕೇರ್ ಟ್ರಸ್ಟ್" ನ ಮುಖ್ಯ ಪೋಷಕರು ಯಾರು ?

(1) ಮುಖ್ಯಮಂತ್ರಿಗಳು
(2) ಸಹಕಾರ ಸಚಿವರು
(3) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
(4) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

78. ಭಾರತದ ಆರ್ಥಿಕ ಸಮೀಕ್ಷೆಯನ್ನು ಹಣಕಾಸು ಸಚಿವಾಲಯದ ಈ ಕೆಳಗಿನ ಯಾವ ಇಲಾಖೆಯು ಸಿದ್ಧಪಡಿಸುತ್ತದೆ ?

(1) ವೆಚ್ಚ ಇಲಾಖೆ
(2) ಕಂದಾಯ ಇಲಾಖೆ
(3) ಆರ್ಥಿಕ ವ್ಯವಹಾರಗಳ ಇಲಾಖೆ
(4) ಹಣಕಾಸು ವ್ಯವಹಾರಗಳ ಇಲಾಖೆ

79. ಕೇಂದ್ರೀಯ ಸೇವೆಯ ಅಧಿಕಾರಿಗಳ ನೇಮಕಾತಿ ಮತ್ತು ಸೇವೆಗೆ ಸಂಬಂಧಿಸಿದ ವಿವಾದಗಳನ್ನು ತೀರ್ಮಾನಿಸುವ ನ್ಯಾಯಮಂಡಳಿ/ಆಯೋಗ ಯಾವುದು ?

(1) ಕೇಂದ್ರೀಯ ಆಡಳಿತಾತ್ಮಕ ನ್ಯಾಯ ಮಂಡಳಿ

(2) ಕೇಂದ್ರ ಲೋಕಸೇವಾ ಆಯೋಗ

(3) ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ

(4) ಸೆಕ್ಯುರಿಟೀಸ್ ಮೇಲ್ಮನವಿ ನ್ಯಾಯಮಂಡಳಿ

80. ಭಾರತೀಯ ಪೌರತ್ವವನ್ನು ಪಡೆಯಲು ಅರ್ಹತೆಗಳನ್ನು ನಿಗದಿಗೊಳಿಸುವ ಅಧಿಕಾರ ಯಾರಿಗೆ ಇದೆ ?

(1) ರಾಷ್ಟ್ರಪತಿಗಳು

(2) ರಾಜ್ಯಪಾಲರು

(3) ರಾಜ್ಯ ಶಾಸಕಾಂಗ

(4) ಸಂಸತ್ತು

81. ಭಾರತದ ಸಂವಿಧಾನದಲ್ಲಿನ ಜಾತ್ಯಾತೀತತೆ ಕುರಿತು ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

**ಹೇಳಿಕೆ I :** 'ಜಾತ್ಯಾತೀತ' ಪದವನ್ನು 1976 ರ 42ನೇ ಸಾಂವಿಧಾನಿಕ ತಿದ್ದುಪಡಿಯ ಮೂಲಕ ಪ್ರಸ್ತಾವನೆಗೆ ಸೇರಿಸಲಾಯಿತು.

**ಹೇಳಿಕೆ II :** ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಗೊಳಿಸುವ 25 ರಿಂದ 28ನೇ ಸಾಂವಿಧಾನಿಕ ವಿಧಿಗಳು ಭಾರತವು ಜಾತ್ಯಾತೀತ ರಾಷ್ಟ್ರವಾಗಿರಲು ಆದೇಶಿಸುತ್ತದೆ.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಯಾವುದೆಂದು ಆಯ್ಕೆ ಮಾಡಿ.

(1) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ ಮತ್ತು ಹೇಳಿಕೆ I ನ್ನು ಹೇಳಿಕೆ II ವಿವರಿಸುತ್ತದೆ.

(2) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ, ಆದರೆ ಹೇಳಿಕೆ I ನ್ನು ಹೇಳಿಕೆ II ವಿವರಿಸುವುದಿಲ್ಲ.

(3) ಹೇಳಿಕೆ I ಸರಿ ಆದರೆ, ಹೇಳಿಕೆ II ತಪ್ಪು.

(4) ಹೇಳಿಕೆ I ತಪ್ಪು ಆದರೆ, ಹೇಳಿಕೆ II ಸರಿ.

82. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸಲು ಅಗತ್ಯವಾದ ಕನಿಷ್ಠ ವಯಸ್ಸು

(1) 21 ವರ್ಷ

(2) 25 ವರ್ಷ

(3) 30 ವರ್ಷ

(4) 35 ವರ್ಷ

83. ಸಂವಿಧಾನ ತಿದ್ದುಪಡಿಗೆ ಸಂಬಂಧಿಸಿದಂತೆ ವಿಧಿ ಮತ್ತು ಭಾಗವನ್ನು ಗುರುತಿಸಿ

(1) 366 ನೇ ವಿಧಿ ಮತ್ತು ಭಾಗ XI

(2) 367 ನೇ ವಿಧಿ ಮತ್ತು ಭಾಗ XI

(3) 368 ನೇ ವಿಧಿ ಮತ್ತು ಭಾಗ XX

(4) 368 ನೇ ವಿಧಿ ಮತ್ತು ಭಾಗ XXI

84. ಅನುಸೂಚಿತ ಬುಡಕಟ್ಟುಗಳ (STs) ರಾಷ್ಟ್ರೀಯ ಆಯೋಗಕ್ಕೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಓದಿ

a. ಆಯೋಗವು ಸಾಂವಿಧಾನಿಕ ಸಂಸ್ಥೆಯಾಗಿದೆ.

b. 338A ನೇ ವಿಧಿ ಆಯೋಗದ ಸ್ಥಾಪನೆಗೆ ಅವಕಾಶ ಮಾಡಿಕೊಡುತ್ತದೆ.

c. ಪ್ರತ್ಯೇಕ ಅನುಸೂಚಿತ ಬುಡಕಟ್ಟುಗಳ ರಾಷ್ಟ್ರೀಯ ಆಯೋಗ 2004 ರಲ್ಲಿ ಅಸ್ತಿತ್ವಕ್ಕೆ ಬಂದಿತು.

d. ಭಾರತದ ರಾಷ್ಟ್ರಪತಿಗಳು ಆಯೋಗದ ಅಧ್ಯಕ್ಷರಾಗಿರುತ್ತಾರೆ.

ಸರಿಯಾದ ಹೇಳಿಕೆಗಳನ್ನು ಗುರುತಿಸಿ :

(1) a, c ಮತ್ತು d
(2) a, b ಮತ್ತು d
(3) a, b ಮತ್ತು c
(4) b, c ಮತ್ತು d

85. ಭಾರತ ಸಂವಿಧಾನ ಎರವಲು ಪಡೆದ ಲಕ್ಷಣಗಳ ಮೂಲಗಳನ್ನು ಹೊಂದಿಸಿ ಬರೆಯಿರಿ.

| *ಪಟ್ಟಿ I* (*ಮೂಲಗಳು*) | *ಪಟ್ಟಿ II* (*ಎರವಲು ಪಡೆದ ಲಕ್ಷಣ*) |
|---|---|
| a. ಐರ್ಲೆಂಡ್ ಸಂವಿಧಾನ | i. ಸಮವರ್ತಿ ಪಟ್ಟಿ |
| b. ಆಸ್ಟ್ರೇಲಿಯಾ ಸಂವಿಧಾನ | ii. ಸಂವಿಧಾನ ತಿದ್ದುಪಡಿ ವಿಧಾನ ಮತ್ತು ರಾಜ್ಯ ಸಭೆಗೆ ಸದಸ್ಯರನ್ನು ಚುನಾಯಿಸುವ ವಿಧಾನ |
| c. ಫ್ರಾನ್ಸ್ ಸಂವಿಧಾನ | iii. ರಾಜ್ಯ ನೀತಿಯ ನಿರ್ದೇಶಕ ತತ್ವಗಳು |
| d. ದಕ್ಷಿಣ ಆಫ್ರಿಕಾ ಸಂವಿಧಾನ | iv. ಪ್ರಸ್ತಾವನೆಯಲ್ಲಿರುವ ಸ್ವಾತಂತ್ರ್ಯ ಮತ್ತು ಭ್ರಾತೃತ್ವ |

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a-ii, b-iii, c-i, d-iv
(2) a-iv, b-ii, c-iii, d-i
(3) a-iii, b-i, c-iv, d-ii
(4) a-i, b-iv, c-ii, d-iii

86. ಹೊಸ ಅಖಿಲ-ಭಾರತ-ಸೇವೆಯನ್ನು ಹೇಗೆ ಸೃಜಿಸಬಹುದು ?

(1) ರಾಜ್ಯಸಭೆಯಲ್ಲಿ ನಿರ್ಣಯದ ಮೂಲಕ
(2) ಸಂಸತ್ತಿನ ಕಾಯ್ದೆಯ ಮೂಲಕ
(3) ರಾಷ್ಟ್ರಪತಿಯವರ ಆದೇಶದ ಮೇರೆಗೆ
(4) ಯು.ಪಿ.ಎಸ್.ಸಿ. ಯ ಆದೇಶದ ಮೇರೆಗೆ

87. ಭಾರತದ ಸಂವಿಧಾನದ 101 ನೇ ತಿದ್ದುಪಡಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

a. ಸಂಸತ್ತು ಇದನ್ನು 2015 ರಲ್ಲಿ ಅಂಗೀಕರಿಸಿತು.

b. ಇದು ಜಿ.ಎಸ್.ಟಿ.ಗೆ ಅನುವು ಮಾಡಿಕೊಟ್ಟಿತು.

c. ಇದು ಜಿ.ಎಸ್.ಟಿ. ಮಂಡಳಿಯ ಸ್ಥಾಪನೆಗೆ ಅವಕಾಶ ನೀಡಿತು.

ಈ ಮೇಲಿನ ಯಾವ ಹೇಳಿಕೆ/ಗಳು ತಪ್ಪಾಗಿದೆ/ವೆ ?

(1) a ಮಾತ್ರ
(2) a ಮತ್ತು b ಮಾತ್ರ
(3) a, b ಮತ್ತು c
(4) b ಮತ್ತು c ಮಾತ್ರ

88. ಮುನ್ಸಿಪಲ್ ಕಾರ್ಪೋರೇಷನ್‌ನ ಮುನ್ಸಿಪಲ್ ಕಮಿಷನರ್‌ರವರನ್ನು ಯಾರು ನೇಮಕ ಮಾಡುತ್ತಾರೆ ?

(1) ಭಾರತದ ರಾಷ್ಟ್ರಪತಿ
(2) ಮೇಯರ್
(3) ರಾಜ್ಯಪಾಲರು
(4) ರಾಜ್ಯ ಸರ್ಕಾರ

89. ಕೆಳಗೆ ನೀಡಿರುವ ರಾಜ್ಯ ನೀತಿ ನಿರ್ದೇಶಕ ತತ್ವಗಳಿಗೆ ಸಂಬಂಧಿಸಿದ ಹೇಳಿಕೆಗಳನ್ನು ಓದಿ :

a. ಭಾರತ ಸಂವಿಧಾನದ IV ನೇ ಭಾಗದಲ್ಲಿ ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಸೇರಿಸಲಾಗಿದೆ.

b. ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಕಾನೂನಿನ ಮೂಲಕ ಅನುಷ್ಠಾನಗೊಳಿಸಬಹುದು.

c. ರಾಜ್ಯ ನೀತಿ ನಿರ್ದೇಶಕ ತತ್ವಗಳು ನ್ಯಾಯ ರಕ್ಷಿತವಾದವುಗಳು.

ಸರಿಯಾದ ಹೇಳಿಕೆಗಳನ್ನು ಗುರುತಿಸಿ :

(1) a ಮಾತ್ರ
(2) b ಮತ್ತು c
(3) b ಮಾತ್ರ
(4) a ಮತ್ತು b

90. ಭಾರತ ಸರ್ಕಾರದ ಕಾಯ್ದೆ, 1935 ರ ಕುರಿತು ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

a. ಕಾಯ್ದೆಯು ಕೇಂದ್ರ ಮತ್ತು ಪ್ರಾಂತ್ಯಗಳ ನಡುವೆ ಅಧಿಕಾರ ವಿಭಜನೆಯನ್ನು ಮಾಡಿತು.

b. ಕಾಯ್ದೆಯು ಕೇಂದ್ರದಲ್ಲಿ ದ್ವಿ-ಸರ್ಕಾರವನ್ನು ಅಳವಡಿಸಿಕೊಳ್ಳಲು ಅವಕಾಶ ನೀಡಿತು.

c. ಕಾಯ್ದೆಯು ಸಾರ್ವತ್ರಿಕ ಮತದಾನ ಹಕ್ಕನ್ನು ಪರಿಚಯಿಸಿತು.

d. ಕಾಯ್ದೆಯು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದ ಸ್ಥಾಪನೆಗೆ ಅವಕಾಶ ನೀಡಿತು.

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆಗಳನ್ನು ಗುರುತಿಸಿ :

(1) a, b ಮತ್ತು c
(2) a, b ಮತ್ತು d
(3) a, c ಮತ್ತು d
(4) b, c ಮತ್ತು d

Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ

87. ಭಾರತದ ಸಂವಿಧಾನದ 101 ನೇ ತಿದ್ದುಪಡಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

a. ಸಂಸತ್ತು ಇದನ್ನು 2015 ರಲ್ಲಿ ಅಂಗೀಕರಿಸಿತು.

b. ಇದು ಜಿ.ಎಸ್.ಟಿ.ಗೆ ಅನುವು ಮಾಡಿಕೊಟ್ಟಿತು.

c. ಇದು ಜಿ.ಎಸ್.ಟಿ. ಮಂಡಳಿಯ ಸ್ಥಾಪನೆಗೆ ಅವಕಾಶ ನೀಡಿತು.

ಈ ಮೇಲಿನ ಯಾವ ಹೇಳಿಕೆ/ಗಳು ತಪ್ಪಾಗಿದೆ/ವೆ ?

(1) a ಮಾತ್ರ
(2) a ಮತ್ತು b ಮಾತ್ರ
(3) a, b ಮತ್ತು c
(4) b ಮತ್ತು c ಮಾತ್ರ

88. ಮುನ್ಸಿಪಲ್ ಕಾರ್ಪೋರೇಷನ್‌ನ ಮುನ್ಸಿಪಲ್ ಕಮಿಷನರ್‌ರವರನ್ನು ಯಾರು ನೇಮಕ ಮಾಡುತ್ತಾರೆ ?

(1) ಭಾರತದ ರಾಷ್ಟ್ರಪತಿ
(2) ಮೇಯರ್
(3) ರಾಜ್ಯಪಾಲರು
(4) ರಾಜ್ಯ ಸರ್ಕಾರ

89. ಕೆಳಗೆ ನೀಡಿರುವ ರಾಜ್ಯ ನೀತಿ ನಿರ್ದೇಶಕ ತತ್ವಗಳಿಗೆ ಸಂಬಂಧಿಸಿದ ಹೇಳಿಕೆಗಳನ್ನು ಓದಿ :

a. ಭಾರತ ಸಂವಿಧಾನದ IV ನೇ ಭಾಗದಲ್ಲಿ ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಸೇರಿಸಲಾಗಿದೆ.

b. ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಕಾನೂನಿನ ಮೂಲಕ ಅನುಷ್ಠಾನಗೊಳಿಸಬಹುದು.

c. ರಾಜ್ಯ ನೀತಿ ನಿರ್ದೇಶಕ ತತ್ವಗಳು ನ್ಯಾಯ ರಕ್ಷಿತವಾದವುಗಳು.

ಸರಿಯಾದ ಹೇಳಿಕೆಗಳನ್ನು ಗುರುತಿಸಿ :

(1) a ಮಾತ್ರ
(2) b ಮತ್ತು c
(3) b ಮಾತ್ರ
(4) a ಮತ್ತು b

90. ಭಾರತ ಸರ್ಕಾರದ ಕಾಯ್ದೆ, 1935 ರ ಕುರಿತು ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

a. ಕಾಯ್ದೆಯು ಕೇಂದ್ರ ಮತ್ತು ಪ್ರಾಂತ್ಯಗಳ ನಡುವೆ ಅಧಿಕಾರ ವಿಭಜನೆಯನ್ನು ಮಾಡಿತು.

b. ಕಾಯ್ದೆಯು ಕೇಂದ್ರದಲ್ಲಿ ದ್ವಿ-ಸರ್ಕಾರವನ್ನು ಅಳವಡಿಸಿಕೊಳ್ಳಲು ಅವಕಾಶ ನೀಡಿತು.

c. ಕಾಯ್ದೆಯು ಸಾರ್ವತ್ರಿಕ ಮತದಾನ ಹಕ್ಕನ್ನು ಪರಿಚಯಿಸಿತು.

d. ಕಾಯ್ದೆಯು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾದ ಸ್ಥಾಪನೆಗೆ ಅವಕಾಶ ನೀಡಿತು.

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆಗಳನ್ನು ಗುರುತಿಸಿ :

(1) a, b ಮತ್ತು c
(2) a, b ಮತ್ತು d
(3) a, c ಮತ್ತು d
(4) b, c ಮತ್ತು d

91. ಕೆಳಗೆ ಕೊಟ್ಟಿರುವ ಭಾರತದ ಉಪರಾಷ್ಟ್ರಪತಿಗಳಲ್ಲಿ ಅವಿರೋಧವಾಗಿ ಚುನಾಯಿತರಾದವರು ಯಾರು ?

(1) ಡಾ. ಎಸ್. ರಾಧಾಕೃಷ್ಣನ್

(2) ಡಾ. ಶಂಕರ ದಯಾಳ್ ಶರ್ಮಾ

(3) ಡಾ. ಝಾಕೀರ್ ಹುಸೇನ

(4) ಜಗದೀಪ್ ಧನಕರ್

92. ಭಾರತದ ಕೇಂದ್ರ ಶಾಸಕಾಂಗಕ್ಕೆ ಸಂಬಂಧಿಸಿದ ಹೇಳಿಕೆಗಳನ್ನು ಗಮನಿಸಿ.

a. ಸಂವಿಧಾನದ 79ನೇ ವಿಧಿಯು ಕೇಂದ್ರ ಶಾಸಕಾಂಗದ ರಚನೆಯ ಬಗ್ಗೆ ವಿವರಿಸುತ್ತದೆ.

b. ಕೇಂದ್ರ ಶಾಸಕಾಂಗವು 'ಸಂಸತ್ತು' ಎಂದೂ ಕರೆಯಲ್ಪಡುತ್ತದೆ.

c. ಕೇಂದ್ರ ಶಾಸಕಾಂಗಲ್ಲಿ ಮೇಲ್ಮನೆಯು ಕೆಳಮನೆಗಿಂತ ಹೆಚ್ಚು ಶಕ್ತಿಶಾಲಿಯಾಗಿದೆ.

d. ಕೇಂದ್ರ ಶಾಸಕಾಂಗದಲ್ಲಿ ಎರಡೂ ಸದನಗಳು ದೇಶದ ಜನತೆಯನ್ನು ಪ್ರತಿನಿಧಿಸಲ್ಪಡುತ್ತದೆ.

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆಗಳು ಯಾವುವು ?

(1) a ಮತ್ತು b ಮಾತ್ರ

(2) a ಮತ್ತು c ಮಾತ್ರ

(3) a, b ಮತ್ತು d ಮಾತ್ರ

(4) a, b ಮತ್ತು c ಮಾತ್ರ

93. ಕರ್ನಾಟಕದ ಏಕೀಕರಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ.

a. ರಾಜ್ಯ ಪುನರ್‌ರಚನಾ ಆಯೋಗವು ಮೈಸೂರು ರಾಜ್ಯದ ಏಕೀಕರಣಕ್ಕೆ ಶಿಫಾರಸ್ಸು ಮಾಡಿತು.

b. 1 ನವೆಂಬರ್, 1956 ರಂದು ಏಕೀಕೃತ ಮೈಸೂರು ರಾಜ್ಯ ರಚನೆಯಾಯಿತು.

c. ಏಕೀಕೃತ ಮೈಸೂರು ರಾಜ್ಯದಲ್ಲಿ 21 ಜಿಲ್ಲೆಗಳಿದ್ದವು.

d. ದೇವರಾಜ್ ಅರಸ್‌ರವರು ಏಕೀಕೃತ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿದ್ದರು.

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆಗಳನ್ನು ಗುರುತಿಸಿ :

(1) a, b, c ಮತ್ತು d

(2) a, b ಮತ್ತು c ಮಾತ್ರ

(3) a ಮತ್ತು b ಮಾತ್ರ

(4) a, b ಮತ್ತು d ಮಾತ್ರ

94. 1857 ರ ದೆಹಲಿಯ ದಂಗೆಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ :

**ಹೇಳಿಕೆ I :** ಕೊನೆಯ ಮೊಘಲ್ ದೊರೆ II ನೇ ಬಹದ್ದೂರ್ ಷಾನನ್ನು 'ಭಾರತದ ಚಕ್ರವರ್ತಿ' ಮತ್ತು ದೆಹಲಿ ದಂಗೆಯ ನಾಯಕ ಎಂದು ಘೋಷಿಸಲಾಯಿತು.

**ಹೇಳಿಕೆ II :** ಬ್ರಿಟೀಷ್ ಸೇನಾಧಿಕಾರಿ ಸರ್. ಜಾನ್ ನಿಕೋಲ್ಸನ್ ದೆಹಲಿಯನ್ನು ವಶಪಡಿಸಿಕೊಂಡನು.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಯಾವುದೆಂದು ಆಯ್ಕೆ ಮಾಡಿ ?

(1) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ ಮತ್ತು ಹೇಳಿಕೆ I ನ್ನು ಹೇಳಿಕೆ II ಅನ್ನು ವಿವರಿಸುತ್ತದೆ.

(2) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ ಆದರೆ ಹೇಳಿಕೆ I ನ್ನು ಹೇಳಿಕೆ II ಅನ್ನು ವಿವರಿಸುವುದಿಲ್ಲ.

(3) ಹೇಳಿಕೆ I ಸರಿ, ಆದರೆ ಹೇಳಿಕೆ II ತಪ್ಪು.

(4) ಹೇಳಿಕೆ I ತಪ್ಪು, ಆದರೆ ಹೇಳಿಕೆ II ಸರಿ.

95. ಬಂಗಾಳಕ್ಕೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಗಮನಿಸಿ :

**ಹೇಳಿಕೆ I :** 1765 ರಲ್ಲಿ ರಾಬರ್ಟ್ ಕ್ಲೈವ್ ನು ದ್ವಿಸರ್ಕಾರ ಪದ್ಧತಿಯನ್ನು ಜಾರಿಗೆ ತಂದನು.

**ಹೇಳಿಕೆ II :** ಬ್ರಿಟೀಷರಿಗೆ ಕಂದಾಯ ವಸೂಲಿ ಮಾಡಲು ದಿವಾನಿ ಹಕ್ಕುಗಳನ್ನು ನೀಡಲಾಯಿತು ಹಾಗೂ ನಿಜಾಮನಿಗೆ ಆಡಳಿತ, ಕಾನೂನು ಮತ್ತು ಸುವ್ಯವಸ್ಥೆಯ ಹೊಣೆಗಾರಿಕೆಯನ್ನು ನೀಡಲಾಯಿತು.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಸರಿಯಾದ ಉತ್ತರ ಯಾವುದೆಂದು ಆಯ್ಕೆ ಮಾಡಿ.

(1) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ ಮತ್ತು ಹೇಳಿಕೆ I ನ್ನು ಹೇಳಿಕೆ II ವಿವರಿಸುತ್ತದೆ.

(2) ಹೇಳಿಕೆ I ಮತ್ತು ಹೇಳಿಕೆ II ಎರಡೂ ಸರಿ ಆದರೆ ಹೇಳಿಕೆ I ನ್ನು ಹೇಳಿಕೆ II ವಿವರಿಸುವುದಿಲ್ಲ.

(3) ಹೇಳಿಕೆ I ಸರಿ, ಆದರೆ ಹೇಳಿಕೆ II ತಪ್ಪು.

(4) ಹೇಳಿಕೆ I ತಪ್ಪು, ಆದರೆ ಹೇಳಿಕೆ II ಸರಿ.

96. ಕ್ರಿ.ಶ. 1672 ರಲ್ಲಿ ಶಿವಾಜಿಯ ಸೈನ್ಯ ಮೊಘಲರನ್ನು ಯಾವ ಕದನದಲ್ಲಿ ಸೋಲಿಸಿತು ?

(1) ಪ್ರತಾಪಗಢ ಯುದ್ಧ
(2) ಸಾಲ್ಹೇರ್ ಯುದ್ಧ
(3) ತೋರಣ ಯುದ್ಧ
(4) ಪುರಂದರ ಯುದ್ಧ

97. ಕೆಳಗಿನ ಯಾವ ಸ್ಥಳಗಳಲ್ಲಿ, ಸ್ತೂಪವನ್ನು ನಿರ್ಮಿಸಲಾಗಿಲ್ಲ ?

(1) ಭರಹೂತ್
(2) ಸಾಂಚಿ
(3) ಸಾರನಾಥ
(4) ಕಾರ್ಲೆ

98. ಕ್ರಿಪೂ. 6 ನೇ ಶತಮಾನದ ಗಣರಾಜ್ಯಗಳನ್ನು ಅಲ್ಲಿನ ಆಡಳಿತ ಜನಾಂಗಗಳೊಂದಿಗೆ ಹೊಂದಿಸಿ :

| ಪಟ್ಟಿ I (ಗಣರಾಜ್ಯ) | | ಪಟ್ಟಿ II (ಜನಾಂಗ) | |
|---|---|---|---|
| a. | ವೈಶಾಲಿ | i. | ಮೊರಿಯಾ |
| b. | ಪಾವಾ | ii. | ಲಿಚ್ಛವಿ |
| c. | ಪಿಪ್ಪಲಿವನ | iii. | ವಿದೇಹ |
| d. | ಮಿಥಿಲ | iv. | ಮಲ್ಲರು |

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a-i, b-iii, c-ii, d-iv
(2) a-ii, b-iv, c-i, d-iii
(3) a-ii, b-i, c-iv, d-iii
(4) a-i, b-ii, c-iii, d-iv

99. ಭಾಸನ ಎರಡು ಕೃತಿಗಳನ್ನು ಗುರುತಿಸಿ :

a. *ದೂತವಾಕ್ಯಂ*
b. *ಹಯಗ್ರೀವವಧಾ*
c. *ರಾವಣವಧಾ*
d. *ಚಾರುದತ್ತಂ*

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a ಮತ್ತು b
(2) a ಮತ್ತು d
(3) a ಮತ್ತು c
(4) b ಮತ್ತು d

100. ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದ ಸಂದರ್ಭದಲ್ಲಿ ಬ್ರಿಟೀಷ್ ಸೇನೆಯ ಕಮಾಂಡರ್ ಆಗಿದ್ದವರು ಯಾರು/ಯಾರ್ಯಾರು ?

a. ಜನರಲ್ ಸ್ಟುವರ್ಟ್
b. ಆರ್ಥರ್ ವೆಲ್ಲೆಸ್ಲಿ
c. ಜನರಲ್ ಅಥರ್ಟನ್
d. ಕರ್ನಲ್ ಗೊಡ್ಡಾರ್ಡ್
e. ಜನರಲ್ ಹ್ಯಾರಿಸ್

ಕೆಳಕಂಡ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ :

(1) a ಮತ್ತು e
(2) b ಮಾತ್ರ
(3) a ಮತ್ತು d
(4) b ಮತ್ತು e

Space for Rough Work / ಕಚ್ಚಾ ಕಾರ್ಯಕ್ಕೆ ಸ್ಥಳ